ಭಜನಾನಂದಬೋಧೆ

(ಪ್ರ)

|| ಶ್ರೀಕಂಠೇಶವರ ಸಹಾಯ ||

ಭಕ್ತಿ, ನೀತಿ, ಜ್ಞಾನ, ಸುಭೋದ, ಸಚಿತ್ರ,

ಭಜನಾನಂದ ಬೋಧೆ;

ಅಥವಾ

ಕಲ್ಯಾಣಪುರದ ತತ್ವಗಳು,

ಕಲ ಭಕ್ತಜನಪದದವರಿಗೂ ಉಪಯು
ಕ್ತವಾಗಿರುವಂತೆ ಶ್ರೀ ಶಾರದಾ ಸಾಹಿ
ತ್ಯ ಭಂಡಾರದವರಿಂದ ಮುದ್ರಿಸಿ
ಪ್ರಕಟಿಸಲ್ಪಟ್ಟಿತು.

ುದ್ಧಪ್ರತಿಗಳ ಸಮಸಂಖ್ಯೆ ಎರಡು
ಸಾವಿರಕ್ಕೆ ಮುಟ್ಟಿದೆ.]

ಕಿ ೨-೫-೦ Price 0.5.0

ಶ್ರೀಕಂಠೇಶ ವರ ಸಹಾಯ

ಸಚಿತ್ರ

ಭಜನಾನಂದಬೋಧೆ.

ಮತ್ತು

ಕಲ್ಯಾಣಪುರದ ತತ್ವಗಳು

ಎಂಬೀ ಗ್ರಂಥವು

ಕನಕದಾಸ, ಪುರಂದರದಾಸ, ಕಬೀರದಾಸರೇ ಮೊದಲಾದ
ಭಗವದ್ಭಕ್ತರುಗಳಿಂದುಕ್ತವಾದ ಕೃತಿಕೀರ್ತನೆಗಳನ್ನು ಸಂಗ್ರಹಿಸಿ
ಸರ್ವರಿಗೂ ತಿಳಿಯುವಂತೆ

ಶ್ರೀ ಶಾರದಾ ಸಾಹಿತ್ಯಭಂಡಾರದವರಿಂದ


ಪ್ರಕಟಿಸಲ್ಪಟ್ಟಿತು.

ರದು.

ಬೆಂಗಳೂರು ಸಿಟಿ:

ಗಿರಿಜಾ ವಿಲಾಸ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

೧೯೩೧.



ಮೊದಲ ಮಾತು

ಮನುಷ್ಯನಾದವನು ಶಾಶ್ವತವಾದ ಮೋಕ್ಷವನ್ನು ಗಳಿಸಬೇಕಾದರೆ ಮೋಕ್ಷಾಧಿಕಾರಿಯಾದ ಪರಮೇಶ್ವರನನ್ನು ಪ್ರೀತಿಪಾಶದಿಂದ ಬಿಗಿದು ಸ್ನೇಹಿತನನ್ನಾಗಿ ಮಾಡಿಕೊಂಡು ಆತನ ಪರಿಪೂರ್ಣ ಅನುಗ್ರಹವನ್ನು ಪಡೆಯಬೇಕು. ಇಷ್ಟಾದ ಹೊರತು ಆ ಶಾಶ್ವತ ಮೋಕ್ಷದ ಗಂಧವನ್ನೂ ಸಹ ಈ ಅಲ್ಪಮಾನವನು ಆಘ್ರಾಣಿಸಲಾರನು. ಹೀಗಿರಲು ಆತನ ಅನುಗ್ರಹವನ್ನು ಹೊಂದಲು ಮನುಷ್ಯಮಾತ್ರನಿಗೆ—"ಶ್ರವಣಂ ಕೀರ್ತನಂ ವಿಷ್ಣೋಃ। ಸ್ಮರಣಂ ಪಾದಸೇವನಂ! ಅರ್ಚನಂ ವಂದನಂ ದಾಸ್ಯಂ। ಸಖ್ಯಮಾತ್ಮನಿವೇದನಂ" ಎಂಬ ನವವಿಧಮಾರ್ಗಗಳಿರುವುವು. ಆದರೂ, ಈ ಕಲಿಯುಗದ ನಾಗರೀಕರಲ್ಲಿ ಆ ಪರಮಾತ್ಮನ ಅನಂತನಾಮಗಳನ್ನು ಕೀರ್ತನೆಗಳಿಂದ ಕೀರ್ತಿಸುವ ಸುಲಭಮಾರ್ಗವನ್ನು ಬಿಟ್ಟರೆ ಮಿಕ್ಕಾವಮಾರ್ಗಗಳೂ ಮೋಕ್ಷಸಾಧನೆಗೆ ಸುಲಭವಾದುವುಗಳಲ್ಲ. ಆದುದರಿಂದಲೇ ಕನಕದಾಸ, ಪುರಂದರದಾಸಾದಿ ಭಗವದ್ಭಕ್ತರು ಅನಂತ ಕಲ್ಯಾಣಮೂರ್ತಿಯಾದ ಆ ಪರಮಾತ್ಮನನ್ನು ಕೃತಿಕೀರ್ತನೆಗಳ ಮೂಲಕ, ಅನಂತವಾಗಿ ಕೊಂಡಾಡಿ ತಮ್ಮ ಅಪ್ರತಿಮ ಪ್ರೇಮಪಾಶಗಳಿಂದ ಬಿಗಿದು ಆತನ ಅನುಗ್ರಹವನ್ನು ಹೊಂದಿ ನಶ್ವರವಾದ ಈ ಭವಸಾಗರವನ್ನು ದಾಟಿ ಶಾಶ್ವತ ಮೋಕ್ಷ ಸಾಮ್ರಾಜ್ಯವನ್ನು ಸೂರೆಗೊಂಡು ಕೃತಕೃತ್ಯರಾಗಿರುವರು.

ಹೀಗೆ ಭಗವದ್ಭಕ್ತರು ಭಕ್ತೋದ್ಧಾರಕ್ಕಾಗಿ ಹೊರಸೂಸಿರುವ ಆ ಪರಮಾತ್ಮನ ನಾಮಗಳು ಹೇರಳವಾಗಿ ನಮ್ಮ ಕನ್ನಡದಲ್ಲಿರುವುವು. ಅಂಥವುಗಳನ್ನೆಲ್ಲಾ ಒಂದು ಪುಸ್ತಕವಾಗುವಂತೆ ರೂಪು ಕೊಟ್ಟು, ಯಾವುದೋ ಒಂದು ತಮ್ಮ ಸ್ವಕಲ್ಪ ಕಲ್ಪಿತವಾದ ಅಙ್ಕಮುದ್ರೆಯನ್ನು ಮೇಲ್ಮುಖಪುಟದ ಮೇಲೆ ಒತ್ತಿ ಅದನ್ನು ಕಾಯ್ದಿಟ್ಟು, ಆ ಗ್ರಂಥದ ಸರ್ವಸ್ವಾತಂತ್ರ್ಯವೆಲ್ಲಕ್ಕೂ ತಾವೇ ಸರ್ವಾಧಿಕಾರಿಗಳೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ಕೆಲವು ಸುಪ್ರಸಿದ್ಧ ಪ್ರಕಾಶರತ್ನಗಳ ಸರ್ವಾಧಿಕಾರಕ್ಕೆ ಮಸಿಯನ್ನು ಹಚ್ಚಿ ದೇಶೋದ್ಧಾರಕಕ್ಕೆ ಭಕ್ತೋದ್ಧಾರಕಕ್ಕೂ ಆರ್ಯಜರು ರಚಿಸಿರುವ, ಕೃತಿ ಕೀರ್ತನೆಗಳ ಕೀರ್ತಿಯು ದಿಗಂತವಿಶ್ರಾಂತವಾಗಿ ಪ್ರಪಂಚದಲ್ಲೆಲ್ಲಾ ಹರಡಲು ತಕ್ಕ ಪ್ರಯತ್ನಗಳನ್ನು ಮಾಡಬೇಕೆಂಬುದೇ ಈ ನವಪ್ರಕಾಶಕನ ಮುಖೋದ್ದೇಶ.

ಪ್ರಿಯಕರ್ನಾಟಕ ಬಾಂಧವರು ಈ ಪ್ರಕಾಶಕನಿಗೆ ಎರವಾಗಿ ನಿಂತು ಇವನು ಪ್ರಚುರಪಡಿಸುತ್ತಿರುವ ಗ್ರಂಥಗಳನ್ನು ಕೊಂಡುಕೊಳ್ಳುವುದರ ಮೂಲಕ ಸ್ವಹಸ್ತಪರಹಸ್ತಗಳಿಂದ ಸಹಾಯವನ್ನಿತ್ತು ದಾಸರಾಯರುಗಳ ಕೀರ್ತಿಗೌರವಗಳನ್ನು ಪ್ರಪಂಚದಲ್ಲೆಲ್ಲಾ ಹಬ್ಬಿಸಿ ಅವರುಗಳ ಅನುಗ್ರಹಕ್ಕೆ ಪಾತ್ರರಾಗಲೆಂದು ಕೋರುವ,

ಇತಿ ಸುಜನಪಾದಾಬ್ಜ ಮಕರಂದಪಾನೈಕನಿರತ,

ಜಿ. ಯೆ.ಕ. ಗುರುನಂಜಶ್ರೇ,

ಭಂಡಾರಾಧಿಕಾರಿ.

ಮೂಳೆಮೂರ್ತಿಗೆ ಅರ್ಧಚಂದ್ರಪ್ರಯೋಗ

ಶ್ಯಾಮಲ ಮೂರ್ತಿಯು ಕೈಲಿ ಕಾಸಿಲ್ಲದೆ ವ್ಯಾಪಾರದೂರಿಗೆ ಬಂದನು. ಎಲ್ಲೆಲ್ಲಿಯೋ ಸುತ್ತಿದನು. ಯಾರೂ ಇವನನ್ನು ಒಳಕ್ಕೆ ಕರೆದು ಮಣೆಯನ್ನು ಹಾಕಿ ಕೂಡಿಸಲಿಲ್ಲ. ಕಡೆಗೆ ಉದಾರಹೃದಯರಾದ ಶ್ರೀಮಾನ್ ಶಾರದಾ ವಿಲಾಸ ಪ್ರಿಂಟಿಂಗ್ ಪ್ರೆಸ್ ಪ್ರೊಪ್ರೈಟರ್ ಟಿ. ಎಸ್. ವೆಂಕಪ್ಪನವರು ಜನ್ಮವಿತ್ತರು. ಆಮೇಲೆ ಮುದ್ದು ಮೂರ್ತಿಗೆ ಚೈತನ್ಯವೇನೋ ಬಂದಿತು. ಅದು ಬರುವುದೇ ತಡ ಕಂಕುಳಲ್ಲಿ ಕಂತೆಯ ಕಡತವನ್ನಿಟ್ಟುಕೊಂಡು ಜೋಳಿಗೆಯನ್ನು ಬಗಲಿಗೆ ಸಿಕ್ಕಿಸಿ ನಡುಬೀದಿಗೆ ಬಂದು ಕಡತವನ್ನು ಒದರಿ ತಂದಿದ್ದ ಜೋಳಿಗೆಯನ್ನು ಅಲ್ಲಾಡಿಸಿದನು. ಕಾಬಿಲ್ಲದ ಕಾಸುಗಳು ತಾವಾಗಿಯೇ ಬಂದು ಜೋಳಿಗೆಯಲ್ಲಿ ಪದಪದನೆ ಉದುರಿದವು. ಜೋಳಿಗೆಯಂತೂ ತುಂಬಿತು. ಅಂದು ಮೊದಲುಗೊಂಡು ಮೂರ್ತಿಯ ಮುಖದ ಮೇಲೆ ಒಂದು ವಿಧವಾದ ಆನಂದ ಲಹರಿಯು ತಲೆದೋರಿತು! ಜನ್ಮವಿತ್ತವರು ವಿಲಾಸದ ವೆಂಕಪ್ಪನವರಲ್ಲವೇ? ಧನ್ಯ! ಧನ್ಯ!! ಮೂಳೆಮೂರ್ತಿಯು ಪರಮ ಧನ್ಯ!! ಶೃಂಗಾರ ಪೋಷಾಕುಗಳನ್ನು ಧರಿಸಿದ ಶ್ಯಾಮಲಮೂರ್ತಿಯು ತಿರುಪೆಯ ಕಾಸುಗಳಲ್ಲಿ ತಾನು ಸ್ವಲ್ಪ ತಿಂದು ಉಳಿದವುಗಳನ್ನೆಲ್ಲಾ ಕೇಸರಿಯ ಬಾಯಿಗಿಟ್ಟು ತನ್ನ ಹಣೆಗೆ ಮಸಿಯ ಮುದ್ರೆಗಳನ್ನು ಒತ್ತಿಸಿಕೊಂಡು ಶೃಂಗಾರಸಾಗರದಲ್ಲಿ ಓಲಾಡುತ್ತಾ ಪುನಃ ಬೀದಿಗೆ ಬಿದ್ದನು. ಸಂದಿ ಗೊಂದಿಗಳಲ್ಲಿ ಸುಳಿದಾಟವು ಬಹು ಸಡಗರದಿಂದ ನಡೆಯುತ್ತಿರುವುದು-ಒಂದೆರಡು ಸಾರಿ ಅರ್ಧಚಂದ್ರ ಪ್ರಯೋಗವು ಇವನಿಗಾದರೂ ಇವನ ಕೆಚ್ಚೆದೆಯು ಇನ್ನೂ ಕರಗಲಿಲ್ಲ. ಇವನ ಮುಂದಿನ ಪರಿಣಾಮವನ್ನು ಮುಂದಿನ ಚಿತ್ರದಲ್ಲಿ ಚಿತ್ರಿಸಲಿಚ್ಛಿಸಿರುವೆವು.

—ಅಗಸ್ತ್ಯಭ್ರಾತ.

ತ್ವರೆಮಾಡಿ!   ಅಪೂರ್ವ ಸುಸಂದರ್ಭ !!

ಮೋಕ್ಷ ಸಾಮ್ರಾಜ್ಯ ಸೂರೆಯು ಅಡಿಗಲ್ಲು !

ವೇದಾಂತ ವಿಚಾರಸಾಗರದಲ್ಲಿಳಿದಿರುವವರಿಗೊಂದು ದಡ !!

ಭಕ್ತ ವೃಂದದಲ್ಲಿ ವಿನಂತಿ,

ಲೋಕೋದ್ಧಾರಕ್ಕಾಗಿ ಪರಮಾತ್ಮಾಂಶಸಂಭೂತ ರಾದ ವೇದವ್ಯಾಸಮಹರ್ಷಿಗಳಿಂದ ಉತ್ತಮವಾದ ಉಪ ನಿಷತ್ ಗ್ರಂಥಗಳನ್ನು ಸಂಗ್ರಹಿಸಿ ಸಕಲ ಪಾಮರ ವರ್ಗ ಕ್ಕೂ ಅಭ್ಯಾಸಿಸಲು ಸುಲಭವಾಗಿರುವಂತೆ ಶ್ರೀ ಶುಷ್ಕ ವೇದಾಂತ ತಮೋಭಾಸ್ಕರವೆಂಬ ಅನ್ವರ್ಥನಾಮಾಂಕಿತ ದಿಂದ ಯುಕ್ತವಾಗಿ ತಿಳಿಗನ್ನಡದ ತಿರುಳಿನಲ್ಲಿ ಪ್ರಕಾಶಿಸು ತ್ತಿರುವ ಈ ಗ್ರಂಥರತ್ನವನ್ನು ಸರ್ವರೂ ಸಂಗ್ರಹಿಸಲೆಂದೇ ಕೇವಲ ಗ್ರಂಥದ ಬೆಲೆಯನ್ನು ತಗ್ಗಿಸಲಾಗಿರುವುದು. ಪ್ರತಿಯೊಬ್ಬ ಕನ್ನಡಿಗನಿಂದಲೂ ಅತ್ಯಾವಶ್ಯಕವಾದುದೆಂದು ಹೊಗಳಿಸಿಕೊಂಡಿದೆ.

ಸುಂದರವಾದ ಮುದ್ರಣ ಅಂದವಾದ ಕಾಗದ ಸರ್ವೋ ತ್ಕೃಷ್ಟವಾದ ರಕ್ಷಾಪತ್ರದಿಂದ ವಿರಾಜಿಸುತ್ತಿರುವ ಇದರ ಅತ್ಯಲ್ಪದ ಬೆಲೆ ಎಂಟೇ ಆಣೆ.

ಗ್ರಂಥದ ಪತ್ತೆ.

ಎಸ್. ಹನುಮಂತಯ್ಯ,
ಜಿ. ಗುರುಸ್ವಾಮಿಶೆಟ್ಟಿ, ಬುಕ್ ಸೆಲರ್ಸ್,
ಕುಂಚಿಟಗರಪೇಟೆ, ಬೆಂಗಳೂರು ಸಿಟಿ.



ಸಚಿತ್ರ ಭಕ್ತಿ ಜ್ಞಾನ ನೀತಿ ಎಂಬ

ಭಜನಾನಂದಬೋಧೆ.

ಮತ್ತು

ಕಲ್ಯಾಣಪುರದ ತತ್ವಗಳು

ಶ್ಲೋ॥ ಅಗಜಾನನ ಪದ್ಮಾರ್ಕಂ ಗಜಾನನಮಹರ್ನಿಶಂ ।
ಅನೇಕದಂತಂಭಕ್ತಾನಾಂಮೇಕದಂತಮುಪಾಸ್ಮಹೇ॥

ಗಣಪತಿ ಸ್ತುತಿ

ರಾಗ-ಕಲ್ಯಾಣಿ-ಆದಿತಾಳ.

ತಾಂಡವನೃತ್ಯಹರೇ । ಗಜಾನನ । ತಾಂಡವನೃತ
ಹರೇ ॥ ಪಲ್ಲವಿ ॥ ಧಿಮಿಕಿಟ ಧಿಮಿಕಿಟ । ತಾಳಮೃದಂಗಾ ।

ಬ್ರಹ್ಮಾದಾಳಹರೇ । ಗಜಾನನ ॥೧॥ ಶಂಕರಪುತ್ರಾ । ಸುರನರ ಸ್ತೋತ್ರಾ । ಮಧ್ಯೇ ಶಿವಗೌರೀ । ಗಜಾನನ ॥೨॥ ತೆತ್ತಿಸಕೋಟಿ । ಸುರಗಣಧಾಟಿ । ಇಷ್ಟಾಪೂರ್ತಿಹರೇ । ಗಜಾನನ ॥೩॥ ಅಂದಿನ ದಿನದೊಳು । ಚಂದ್ರಗೆ ಶಾಪವ । ಚಂದದಿ ನೀ ಕೊಟ್ಟೇ । ಗಜಾನನ ॥೪॥ ಸುರವರ ಶಂಕರ । ಗಿರಿಜ ಮನೋಹರ । ಸುರಚಿರವರಕುವರಾ । ಲಂಬೋಧರಾ ॥ ತಾಂಡವ ॥೫॥ ಧರೆಯೊಳುಸಾರದ । ಪುರದೊಳು ನೆಲೆಸಿದ । ಕರಿಮುಖ ಪೊರೆನೀನೇ । ಗಜಾನನ । ತಾಂಡವ ನೃತ್ಯಹರೇ ॥ ೬ ॥

ಸರಸ್ವತಿ ಸ್ತುತಿ

ರಾಗ-ಜಂಜೂಟಿ-ರೂಪಕತಾಳ

(ಇಂದುವದನೆ ಕುಂದರದನೆ ಸುಂದರಾಂಗಿಯೆ ಎಂಬಂತೆ)

ವಾಣಿ ಕಮಲಪಾಣಿ ಬೃಂಗ । ವೇಣಿ ಪುಸ್ತಕ । ಪಾಣಿ ವಿಮಲಶ್ರೋಣಿ । ಸೂಕ್ತಿದೋರಿಣೀಮಣಿ ॥ಪಲ್ಲವಿ॥ ನಿನ್ನ ತಾಂಗಿ । ವರ್ಣಿಸುವೆನು । ವರ್ಣರೂಪಿಣಿ ॥ ಯನ್ನ ಜಿಹ್ವೆಯಲ್ಲಿ ನಲಿಯೆ । ಸ್ವರ್ಣಹಾಸಿನಿ ॥೧॥ ವಲ್ಲಕಿ ವಿನೋದಿನೀ ಸಂ । ಫುಲ್ಲಲೋಚನೆ ॥ ಮಲ್ಲಿಕಾ ಸಮಾನಕಾಂತಿ । ಪಲ್ಲವಾಧರೆ ॥ ೨ ॥ ಇಂದುಕೋಟಿ । ಭಾಸಮಾನ ಸುಂದರಾಂಗಿಯೇ ॥ ವಂದಿಸುವೆನು । ಲಾಕ್ಷ್ಯನಗರ । ಮಂದಿರೇ ಶುಭೆ ॥ ೩ ॥ ವಾಣಿಕಮಲ ॥

ಶಾರದಾ ಸ್ತುತಿ

ರಾಗ-ತೋಡಿ-ಆದಿತಾಳ

(ಸ್ವಾಮಿದೇವನೆ ಲೋಕಪಾವನೆ ಎಂಬಂತೆ)

ಶಾರದೆಯೆ ಶರದಿಂದು । ಸುಂದರಿ । ಬಾಲ ಚಂಪಕ ನಾಶಿಕೇ ॥ ಪ ॥ ನೀಲವೇಣಿ ವಿನೋದವಾಣೀ । ಲೋಲ ಕಲವಾಚಲೋಳಿಕೆ ॥ ಅ ॥ ವಲ್ಲಕೀ ಮೃದುವಾದ ಮೋಹಿತೆ । ವಲ್ಲವಾಧರೆ ಸನ್ನುತೆ ॥ ಬಿಲ್ವಘನಕುಚಲ್ಲವಾಧರೆ । ಚಲ್ಲಿ ಸಾರದಸನ್ನುತೆ ॥ ೧ ॥ ವರ್ನರೂಪಿಣಿ ವರ್ನಭಾಸಿತೆ । ವರ್ನಮಂಗಳ ಭಾಷಿಣಿ ॥ ನಿರ್ನಯಾಮೃತೆ ಸಾರೆಶುಭಕರೆ। ವರ್ನದೇವಿಯೆ ಭಾಸುರೆ ॥ ೨ ॥ ಇಂದು ಸುಂದರ ಕಾಂತಿ ಕೋಮಲೆ । ಕುಂದ ಸಮಕನುಕಲ್ಲವೆ ॥ ವಂದಿಸುವೆ ವರ ದೇನು ಪುರದೊಳು ನಿಂದು ಪಾಲಿಪ ದೇವಿಯೆ ॥ ಶಾರದೆಯೆ ಶರದಿಂದು ॥ ೩ ॥

ಈಶ್ವರ ಸ್ತುತಿ



ರಾಗ-ಹಿಂದೂಸ್ಥಾನಿ-ಆದಿತಾಳ

(ಮಂದರಗಿರಿಧರನೆ ಶ್ರೀವರನೆ ಬಾ ಎಂಬಂತೆ)

ಶ್ರೀಶೈಲಗಿರಿಧರನೇ । ವಿಶ್ವೇಶನೆ ॥ ಪ ॥ ಕೇಶ

ವಿಭೂಷಾ । ದೋಷವಿನಾಶಾ । ಪೋಷಿಸು ಮಲ್ಲೀಶಾ ॥ ಶ್ರೀಶೈಲ ॥ ೧ ॥ ನಿಖಿಲಲೋಕವಾ । ಸಾಕುವ ದೇವಾ । ಭಕ್ತರ ಪಾಲಕನೇ ಶಂಕರನೇ ॥ ಶ್ರೀಶೈಲ ॥ ೨ ॥ ದುಷ್ಟಧ್ವಂಸಹರ, ಮೋಕ್ಷಕರನೆ ವರ । ದಾಕ್ಷಪಾಲನಿಪ । ಶರಣ್ಯಕು ॥ ಶ್ರೀಶೈಲ ॥ ೩ ॥ ಈಶಜಗತ್ಕರ್ತಾ । ದಾಸಮುದ್ದೈರ್ಯ್ಯನ । ಪಾಶವಿಮೋಚನಾ । ಶಿವಾರ್ದ್ಧನೇ ॥ ಶ್ರೀಶೈಲಗಿರಿಧರನೆ ॥

ನವಗ್ರಹ ಪ್ರಾರ್ಥನೆ

ರಾಗ-ತೋಡಿ-ಆದಿತಾಳ

(ಸ್ವಾಮಿದೇವನೆ ಲೋಕಪಾಲನೆ ಎಂಬಂತೆ)

ಕಾಲಚಕ್ರಮನೇರಿ ಭಾಷಿಪ ಬಾಲಸೂರ್ಯನೆ ವಂದಿಪೆ ॥ ಪ ॥ ನೀಲಮೃಗಧರ ಕಾಲರೂಪನೆ ಬಾಲಚಂದ್ರನೆ ಭಾವಿಪೆ ॥ ೧ ॥ ವೃಷ್ಟಿರೂಪನೆ ವೃಷ್ಟಿದಾಯಕ ಶ್ರೇಷ್ಠ ಭೂಮಿಯಾಪುತ್ರನೆ । ಶಿಷ್ಟಜರ ಸುಜ್ಞಾನ ಮೂಡುತಿ ಇಷ್ಟದಾಯಕಸೌಮ್ಯನೆ ॥ ೨ ॥ ದೇವಗಣ ಗುರುಕ್ಷೇಮದಾಯಕ ಜೀವವರ ಗುರುಪಾಲಿಸೈ । ದೇವಶುಕ್ರನೆ ಕಾವ್ಯರೂಪನೆ ಕಾವ್ಯಸೇವ್ಯನೆ ಪೋಷಿಸೈ ॥ ೩ ॥ ಪಂಗುವರ ಮಹಿಮಾಂಗ ಶನಿ ಸನ್ಮಂಗಳಾತ್ಮಕ ಧೀರನೆ । ಮಂಗಳವನೆಸಗೆಂದ ವಂದಿಪೆ ರಾಹುವೆ ವರ ಕೇತುವೆ ॥ ೪ ॥ ಶ್ರೀನಿವಾಸನೆ ಪಾಲಿಸುವದೆಂದೀನವಗ್ರಹ ಭಕ್ತಿಯಿಂ । ಧೀಮನಗರ ಜನೇಶನೇ ವರ ವೆಂಕಟೇಶನೆ ತೋಷಿಪೆ ॥ ೫ ॥

ಗೋಪಾಲಕೃಷ್ಣದೇವರ ಪ್ರಾರ್ಥನೆ


ರಾಗ-ದರ್ಬಾರ್-ರೂಪಕತಾಳ.

(ಉಡುಪಿಕೃಷ್ಣಾ ಪೊಡವಿಗೊಡೆಯ ಎಂಬಂತೆ.)

ದ್ವಾರಕೇಯು । ಕೃಷ್ಣರಾಯಾ । ಧಾರುಣೀಯಾ । ಪಾಲಿಸೈಯ್ಯಾ । ವಾರಿಜಾಕ್ಷಾ । ವೀಯೊ । ವರವಾ । ಕೋರಿಭಜಿಪೆ । ನಮ್ಮ ದೇವಾ ॥ ಪ ॥ ಶರಧಿಶಯನಾ । ಸ್ಮರಿಪರಂಪಾ । ಭರದಿಪೊರೆಯೊ । ಹರನ ಸಖನೇ ॥ ದ್ವಾರ ॥ ೧ ॥ ಪುಟ್ಟಿಜಾಲಾ । ನಂತೆ ಬಂದೂ । ಪಟ್ಟ ಮಂಚ । ವೇರಿಕೊಳುತೂ ಉಟ್ಟುಶೀರೆ । ಶರಗಪಿಡಿದೂ । ಇಷ್ಟನೆರ । ವೇರಿಸೆಂದೂ ॥ ದ್ವಾರ ॥ ೨ ॥ ಪರಮದಯಾ । ಕರನೆ ಯೆಂದೂ । ಸ್ಮರಿಸೆ ತರಳಾ । ಪ್ರಹ್ಲಾದಬಂದೂ । ಮೊರೆಯುಕೇಳೀ । ಕಂಭದಿಂದಾ । ಭರದಿ ಬಂದೂ । ಕಾಯ್ದ ಹರಿಯೋ ॥ ದ್ವಾರ ॥ ೩ ॥ ಬೆರಳಿನಿಂದಾ । ಗಿರಿ ಯನೆತ್ತೀ । ತುರಗಳನ್ನು । ಸಲಹಿದಂತಾ । ಮುರಳಿಗಾ ನಾ । ದಿಂದ ಸಕಲಾ । ತರುಣಿಯಾರ । ಮನವಕದ್ದ ॥ ದ್ವಾರ ॥ ೪ ॥ ಯೆಂಟು ಮಠದಾ । ಮುನಿಗಳಿಂದಾ । ಶ್ರೇಷ್ಠವಾದಾ । ಪೂಜೆಗೊಳುವಾ । ಭಂಟಮಧ್ವೊ । ದಾಸಾನ ಕಾಯೋ । ಸೃಷ್ಟಿಕರ್ತಾ । ವೈಕುಂಠಪತಿಯೇ ॥ ದ್ವಾರ ॥ ೫ ॥

ಭಜನೆ

ರಾಗ-ಹಿಂದುಸ್ತಾನಿ-ಕಾಪಿ. ರೂಪಕತಾಳ.

(ನಾಳೆ ಬರುತೇರತಿಕೇಳಿಗೆ ರಮಣ ಎಂಬಂತೆ.)

ಮಾಧವ ಮಂಗಳ । ನಾಮಬಾರೊ ॥ ಪ ॥ ನಾಮ ಬಾರೊ । ಪ್ರೇಮತೋರೋ ॥ ಅ ॥ ಮಂಗಳನಾಮ । ಹಿಂಗಳಪ್ರೇಮ । ಪೊಂಗಳಲೂದುವ । ಮಂಗಳಶ್ಯಾಮಾ ॥ ೧ ॥ ನಂದನಕಂದ । ಮುಕುಂದಮುರಾರಿ । ಸುಂದರಗೋವಳ । ಪಾಲಕಶೌರೀ ॥ ೨ ॥ ವೇಣುವನೂದುತ ಜಾಣರನೆಲ್ಲಾ । ಮಾಣಿಸಿ ಮಾಯುವ । ಮಾತಿಪಗೆಲ್ಲಾ ॥ ೩ ॥ ಮೂಜಗದೊಡೆಯನೆ । ಗೋಪಾಲಕೃಷ್ಣ ವಿಜಯವಿಠಲ । ವೆಂಕಟರಮಣಾ ॥ ೪ ॥

ಭಜನೆ.

ರಾಗ-ಕಮಾಚ್ ಆದಿತಾಳ.

ಬಾರೋ ಗೋಪಾಲಾ । ಮುಖವನು ತೋರೋ ಶ್ರೀಲೋಲಾ । ಬಾರಿಬಾರಿಗು । ಭಾಗ್ಯವ ಕೊಡುವೋ ತುಲಸೀ ವನಮಾಲಾ ॥ ಇಂದಿರೇಶನೆ । ಬಲುಚಂದಿರ । ಧರಸಖನೇ । ಮಂಧರೋದ್ಧರ । ಮಾಮನೋಹರ । ಮಾರಜನಕಾನೇ ॥ ೧ ॥ ಗೋವ್ಗಳ ಕಾಯ್ದವನೇ ।

ಗೋವರ್ಧನ ಗಿರಿಧರನೇ। ಮಾವ ಕಂಸನ ಮರ್ಧನೆ ॥ ಮಾಡಿದ ಮಾರಜನಕಾನೇ ॥ ೨ ॥ ಪೊಡವಿಪಾಲಿಪನೇ। ಪಾಲ್ಗಡಲ ಶಯನಾನೇ । ಹಡದ ಮಕ್ಕಳನೆಲ್ಲರ । ಸಲಹೋ ವಡೆಯ ವೆಂಕಟೇಶಾನೇ ॥ ಬಾರೋ ಗೋಪಾಲಾ ॥ ೩ ॥

ಭಜನೆ

-ರಾಗ-ಆದಿತಾಳ.

ಹರಿನಾರಾಯಣ । ದುರಿತನಿವಾರಣ । ಕರಿಭಯಹರಣ । ಕೌಂಸ್ತುಭಭರಣಾ ॥ ಹರಿ ॥ ಪ ॥ ಸ್ಮರಿಸುವೆ ನಿನ್ನಂ। ವರದನೆ ಸತತಂ। ಕರುಣದೊಳೆನ್ನನು । ಪೊರೆವುದು ನೀನೇ ॥ ಹರಿ ॥ ೧ ॥ ಸುರಪತಿ ವಿನುತನೆ । ಸರಸಿಜನಯನಾನೆ। ಕರುಣದಿ ಭಕ್ತರ ॥ ಪೊರೆವ ಮಹಾತ್ಮನೇ ॥ ಹರಿ ॥ ೨ ॥ ಪನ್ನಗಶಯನಾನೇ । ಪತಿತಪಾವನಾನೇ। ಪುಂಡರಿಕಾಕ್ಷನೇ। ಪೊಗಳುವೆ ನಾನೇ ಹರಿ ॥೩॥

ಭಜನೆ.

ರಾಗ-ತೋಡಿ-ರೂಪಕತಾಳ.


ನಿಮುವಿನಾ। ಅನ್ಯರೆಕಾಣೆ ॥ ಪ ॥ ವಾರಿಜಾವದನಾ ರಾಮಾ । ನೀರಜನಯನಾ ॥ ೧ ॥ ಕೊಡುವರೊಳಗೆ। ನೀನೆಯೆಂದು । ಬಡವಾಗಿ । ನಾನು ಬಂದೆ । ಅಡಿಯ ಪಿಡಿದು। ಬೇಡಿಕೊಂಬೆ। ದೃಢದಿ ವರವ। ಕೊಡುವರೊಳಗೆ ॥ ೨ । ರಾಮದೂತನಾಗಿ ಬಂದು। ರಾಕ್ಷಸರ ಕುಲವ ಕೊಂದೆ। ಭೀಮನಾಗಿ ಕೌರವರ ಮುರಿದೆ । ರಾಗಪೂರ್ಣ ರಾಘವನೆನಿಪ ॥ ೩ ॥ ಶ್ರೀಕನಾರಸಿಹ್ಮ ಸರ್ವದಾ । ದಾಸದಾಸನೆಂದೆನಿಪಾ। ವ್ಯಾಸರಾಯ ಪೂಜಿತ। ವೆಂಕಟ ವಿಠಲದಾಸ ನಿಮು ವಿನಾ ॥

ಶ್ರೀ ರಾಮದೇವರ ಭಜನೆ (ಅರವ)

ಪಾಶಿ-ರಾಗ-ನೋಟ್-ಚಾಪುತಾಳ

ಶ್ರೀರಾಮ ಚಂದಿರನೆ । ಶ್ರೀಲೋಲ ಸುಂದರನೆ । ಶ್ರೀಮನ್ನಾರಾಯಣನೆ । ವಾವಾವಾ ॥ ಪ ॥ ಪೋಡಿನೆ ಪೊಗಳ್ - ಪಾಡಿನೆ । ಗೋವಿಂದ ಮುಕುಂದನೆ । ಗೋಪಾಲ ವೈಕುಂಠನೆ । ಕೋಟಿಶರಣಾರ ಶಪ್ಡದೆ । ವಾವಾವಾ ॥ ೧ ॥ ನಾಲುಮಣಿ ನೀರತ್ತ್ರಲೆ । ನವರತ್ನಮಂಟಪತ್ತ್ರಲೆ । ನಾರಾಯಣಂಕಿ ಪಲ್ಲಂಗಿಡ್ಡೆ ವಾವಾವಾ ॥೨॥ ಕೋರಿನೇನ್-ಮನಂ - ಕೋರಿನೇನ್ । ದಶರಥಪುತ್ತ್ರನೆ । ದಾಸರ್ಗಳ್ ಮಿತ್ತ್ರನೆ । ದಾಮೋದರೇಂದ್ರನೆ । ವಾವಾವಾ ॥೩॥ ಸಾರ್ತಿನೇನ್ - ತೊಳು - ದೆತ್ತಿನೇನ್ । ಪಟರಾಜರಾಜನೆ । ಪೊಡವಿಪಾಲನೆ । ವಿಜಯಾಲಕ್ಷ್ಮೀನಾಥನೆ ಸಂಗೀತನೇ ವಾವಾವಾ ॥ ೪ ॥

ಶ್ರೀ ಕೃಷ್ಣದೇವರ ಸ್ತುತಿ



ಮುಕುಂದ ಬಾರಯ್ಯಾ ಬಾ ಬಾ ಬಾ । ಮುರಾರಿ ಮಾಧವ ಶ್ರೀಕೃಷ್ಣ ಬಾ ॥ಪ॥ ಗೋವಿಂದ ಬಾ ಗೋಪಾಲ ಬಾ । ಯಶೋದೆಯ ಮುದ್ದು ಕುಮಾರ ಬಾ ॥೧॥ ಕೇಶವ ಬಾ ಮಧುಸೂದನ ಬಾ । ಅಪಾರಶೌರೆ ಗೋಪಾಲ ಶ್ರೀಲೋಲ ॥ ಮುಕುಂದ ॥ ೨ ॥ ಗೋವಿಂದ ಬಾ ಗೋಪಾಲ ಬಾ । ಮಾಧವ ಗೋವಿಂದ ಶ್ರೀ ಕೇಶವ ಬಾ ॥ ೩ ॥

ಭಜನೆ

ರಾಗ-ನೋಟ್-ಏಕತಾಳ

(ಶಿಕ್ಕಿಕು ಶಿಕ್ಕಿಕು ಶಿಕ್ಕಿಕು ಡಾ ಎಂಬಂತೆ)

ರಾಮನೆ ನಂಬಿದೆ ನಿನ್ನ ಸದಾ । ಪ್ರೇಮದಿ ಪಾಲಿಸು ಪಾಮರನಾ । ಪ । ಭೂಮಿಜಾಕಾಂತನೆ ರಾಮಚಂದ್ರಾ । ತಾಮಸ ಮಾಡದೆ ಸಲಹು ಬೇಗಾ । ಕಾಮಲ ರೂಪನೆ ಕೋಮಲಾಂಗಾ । ಸಾಮಜಪಾಲನೆ ಸೋಮಭಾಸ್ಯ ।೧। ಸುರನರ ಪಾಲಕ ಸರಸಿಜಾಕ್ಷಾ । ಕರುಣದಿಂ ಸಲಹು ನೀಂ ಕರಪೋಷಾ । ಪರಿಪರಿ ವಿಧದಲಿ ಎರಗಿ ಸ್ತುತಿಪ । ಶರಣರ ಪೊರೆಯುವ ವರದವಿಠಲಾ ॥ ರಾಮನೆ ॥೨॥ ಚಂದದಿಂ ಕಂದನಂ । ಬಂದು ಪೊರೆವ । ಸುಂದರ ಮೂರುತಿ । ಮಂದಹಾಸಾ । ಇಂದಿರಾಕಾಂತನೆ । ಬಂದು ಸಲಹೋ ವಂದನೆ ಮಾಡುವೆ । ಕುಂದರದನಾ ॥ ರಾಮನೇ ॥೩॥

ಭಜನೆ

ರಾಗ-ಆದಿತಾಳ.

ಶ್ರೀರಂಗಾ । ಭವಭಂಗಾ । ಅಮಿತಾಂಗಾ । ಶುಭಾಂಗಾ । ಪ । ಮಂದರಧರ ಬಾರೊ । ಪಂಕಜ ಮುಖ ತೋರೋ । ಇಂದಿರಕೆಳೆಬೀರೋ ಕಂದರಾ । ಕಂಧರಾ । ಸುಂದರಾ । ಮೂರ್ತಿಯೇ ॥೧॥ ಗಂಗೆಪೆತ್ತಪನ್ನ್ಯಾರೋ । ತುಂಗವಿಕ್ರಮಜಾರೋ । ಯಿಗ್ಗದೆ ಯನ್ನ ಸುತೋರೋ । ಶೃಂಗಾರಾ । ಗಂಭೀರಾ । ಭಂಗಾರಾಕಾರಾ ।೨। ಚರಣಂಗಳ ತೋರೋ । ಕಂಗೊಳಿಸುತ ಬಾರೋ । ಯಿಂಗಳಸವ ಸೇರೋ । ಪಿಂಗಳಾಕಿಂಗಳಾ ಮಂಗಳಾಮೂರ್ತಿಯೇ ॥೩॥

ತಡವ್ಯಾಕೆ ಮಾಡಬೇಡೋ । ಕಡುದುಃಖಪಡುವೆನೋಡೋ । ಪ್ರೊಕಪೇಲೀ । ಪಾಡುಬ್ಯಾಡೋ । ಗಡಗಡಾ ನಡುಗಡಿಗೀ। ಚರೀಚರೀಸುತ್ತಿದೇ ॥ ೪ ॥ ತಿರುಮಾಲಾ । ಗಿರಿವಾಸಾ ತಿರುಪತೀ ವೆಂಕಟೇಶಾ । ವರಬಾಲಾದಾಸಪೋಷ । ನಿರಾಧಾರಾ । ನಿರಾಕಾರಾ । ಕರಾಸರಾಬಾರೋ । ಶ್ರೀರಂಗಾ ।ಅ।

ಭಜನೆ

ರಾಗ-ಆದಿತಾಳ.

ದೊರೆಯುರಸನೆ ನಿನ್ನ । ನಮಿಸುವೆನೊ ಹರೀ । ಮುರಾರಿ ಮೈದೋರೀ । ಪ್ರೀತಿಯೊಳರೀ । ಮುರಾರಿ । ಮೈದೋರೀ ॥ ಪ ॥ ಯದುಕುಲ ತಿಲುಕಾ । ಭುವನ ಹಿತಹರೀ । ಮಾಧವ ಮುರಹರನೇ । ರಾಮೇಶನೇ ಮುರಾರಿ ಮೈದೋರಿ ॥ ೧ ॥ ವಾಸುಕೀಶಯನಾ । ದಾಸಜನಪ್ರಿಯ । ಶಾಕಂಹಿತವಿನುತ । ಭೂವರವರಾ । ಮುರಾರೀ । ಮೈದೋರೀ ॥ ೨ ॥ ದೊರೆಯುರಸನೆ ॥

ಮಹಾರಾಷ್ಟ್ರ

ಶ್ರೀ ಕೃಷ್ಣದೇವರ ಸ್ತುತಿ.

ಭಜನೆ

ರಾಗ-ಮಧ್ಯಮಾವತಿ ಆದಿತಾಳ

ಆನಂದಾಚ । ಕಂದಹರಿಲಾ । ದೇವಕಿನಂದನ । ಪಾಹಿಲಾ । ಪಲ್ಲವಿ । ಭಕ್ತಾಸಾಟಿ ಟಿವುನಿಕರಗಟಿ ಘೀಮಾನಿಕಟಿ ರಾಹಿಲಾ ॥ಅ॥ಪ॥ ಯಜ್ಞಯಾಗ ಜಪ ತಪಾಸನಟುಲೆ ಧ್ಯಾನಧಾರಣೆನಾಕಳಿ ॥೧॥ ಕಂಸಭಯಾನೆ ವಸುದೇವಾನೆ ॥ ನಂದಯಶೋದೆ । ಪಾಹಿಲಾ ॥ ೨ ॥ ನಿರ್ಮಲ ಸಾಚಾ ಪರಿಕಿಗಣಾಚ ಭಗ್ಯಗುಣಾಚಿ ನೋಹಿಲಾ ॥ ೩ ॥

ಭಜನೆ

ರಾಗ-ಜಂಜೂಟಿ-ರೂಪಕತಾಳ

ಎಂದಿಗಾಹುದೊ । ತಂದೆಯೆ । ನಿನ್ನಾನಂದದರುಶನಾ ॥ [illegible]ವಿ ॥ ಇಂದುದುರಿತ । ಬಂದು ಪೋಪುದು । ಬಂಧ[illegible] ॥ ಅ ॥ ಪ ॥ ಮಂದಭಾಗ್ಯನ । ಪಾಪ ನೋಡದೆ ದೇವ । ಕರುಣಾ । ಇಂದಿರಾಪತಿಯೆಂದು । ನಂಬಿದೆ ಸಿಂಧುಶಯನಾ ॥ ೧ ॥ ತೀರಿದವು ಪೊಡೆದು । ಕೋಟಿಕಾದೆ ದೇವ । ನೊರೆಯ ಜಾರದ್ವಾರಕೋ । ಅರವಿಂದಲೋಚನಾ ॥ ೨ ॥ ನಿರುತ ನಿನ್ನನು ಸ್ಮರಿಸುವಾತನೆ ಪರಮಪಾವನಾ । ವರಗುರುಜಯವಿಠಲರಾಯನೆ । ಪೊರೆಯೊ ॥ ರಸಾಕ್ಷಣಾ ॥ ೩ ॥

ಭಜನೆ

ರಾಗ-ಜಂಜೂಟಿ-ಆದಿತಾಳ.

ರಾಮನೆಂಬೆನೋ । ನಾಮವ ನೆನೆದರೆ । ಭಯವಿಲ್ಲ ಮನಕೆ ॥ ಪಲ್ಲವಿ ॥ ಮೂರುಲೋಕಕೆ । ಕಾರಣ ಕರ್ತ । ನಾರಾಯಣ ಜಗಕೆ ॥ ಅ ॥ ಪ ॥ ಮತ್ಸ್ಯಾವತಾರವ । ತಾಳಿದ ರಾಮ । ವೇದವ ತರುವುದಕೆ ॥ ಭೂಮಿಯ ಪೊತ್ತು । ನೀರೊಳು ಮುಣುಗಿದ । ವರಾಹಾವತಾರಕ್ಕೆ ॥ ೧ ॥ ಭೂಮಿದಾನವ ಬೇಡಿದ । ವಾಮನಾವತಾರಕ್ಕೆ ॥ ಕರುಳನು ತೆಗೆದು । ವನಮಾಲೆಧರಿಸಿದ ಪ್ರಹ್ಲಾದನ ಸಲಹುವದಕೆ ॥ ೨ ॥ ವನವಾಸವ ಮಾಡಿದ ರಾಮ । ಸೀತೆಯ ತರುವುದಕೆ । ಮಾವ ಕಂಸನ । ಕೊಂದನು ಕೃಷ್ಣ । ತಾಯನು ಗೆಲುವುದಕೆ ॥ ೩ ॥ ಸತಿಪತಿ ವ್ರತವ ಕೆಡಿಸಿದ ರಾಮಾ । ತ್ರಿಪುರರ ಗೆಲುವುದಕೆ ವಾಹನಬಿಟ್ಟು । ತುರಗವನೇರಿದ । ಕಲಿಕಾವತಾರಕ್ಕೆ ॥ ೪ ॥ ಕಾಮಲವರ್ಣವ ತಾಳಿದ ರಾಮಾ । ಸಾಮರ್ಥ್ಯನು ಜಗಕೆ ॥ ಸ್ವಾಮಿ ಶ್ರೀ ಪುರಂಧರವಿಠಲ । ರಾಮಗೋವಿಂದ ಜಗಕೆ ॥

ಭಜನೆ

ರಾಗ-ಆದಿತಾಳ.

(ಪರಿಪಾಹಿ ಶ್ರೀ ರಘುರಾಮ ಎಂಬಂತೆ)

ಜಯಶ್ರೀ । ಮನೋಹರ ಬೃಂದಾ । ಯದುರಾಜ ಕಂದ ಮುಕುಂದಾ ॥ ಪಲ್ಲವಿ ॥ ಕರುಣಾಕಟಾಕ್ಷ ಶೌರೇ । ಕರುಣಿಸಿ ಕಾಯೋ ಮುರಾರೇ । ಕಮಲಾಸ್ತ್ರ ಚಕ್ರಧಾರೀ ॥ ॥ ೧ ॥ ದಶರಥ । ವಾರಜಾಲಾ । ಹರಿಸಾಮಗಾನವಿಲೋಲಾ । ಜಗದೀಶಮುನಿಕುಲಪಾಲ ॥ ೨ ॥ ಮಹಾರಾಜರಾಜ ಕೃಪಾಂಗ । ದೇವೇಶಗರುಡತುರಂಗಾ । ಕೃಪೆಮಾಡು ನೀಲಾಂಗ ॥ ೩ ॥ ರಾಧಾಮನೋಲ್ಲಾಸ । ಭಕ್ತರಭವಭಯ ದೂರಾ । ಕಲ್ಯಾಣಪುರಿವಾಸಾ ॥ ೪ ॥

ಭಜನೆ

ರಾಗ-ಆದಿತಾಳ

ನಡಿನಡಿ ನಮ್ಮಾ ಮನೆಗೆ । ಶ್ರೀಮದಾಂಜನೇಯ ॥ ಪ ॥ ನಡಿನಡಿನಮ್ಮಾ ಮನೆಗೆ । ನಡೆಮುಡಿಹಾಸುವೆ ನಡೆಯದಾ । ಬಾಗ್ಯವೇನೋ ಕೇಳದೆ । ನಿಮ್ಮ ದಾಸ ॥ ೧ ॥ ರಾಮದೂತನಾಗಿ । ರಾಕ್ಷಸರ ಕುಲವಕೊಂದೆ । ರಾಮಮುದ್ರಿಕೆಯತಂದು । ರಮಣಿಗೆ ದಯಾಸಿಂಧು ॥ ೨ ॥ ಭೀಮಸೇನನೆಂದು ಕೌರವರ ಕುಲವಕೊಂದೆ । ತೊಡೆಯಸೀಳಿದಾನೆಂದು । ಕರುಣಿಸೋ ದಯಾಸಿಂಧು ॥ ೩ ॥ ವೇದವ್ಯಾಸರ ಪೂಜೆ । ಭೇದವಿಲ್ಲದೆ ಮಾಡಿ । ವೇದಪುರನಿವಾಸ । ವೆಂಕಟವಿಠಲದಾಸ ॥ ೪ ॥

ಭಜನೆ

ರಾಗ-ಅಟತಾಳ.

ಪಕ್ಷಿ ಬಂದಿತು । ಅಂಗಳದಲ್ಲಿ । ರಾಮ । ಹಾರಿಹೋಯಿತು । ಅಕ್ಷಣದಲ್ಲಿ । ರಾಮ ॥ ಪಲ್ಲವಿ ॥ ಹ್ಯಾಗೆ ಇರ

ಬೇಕು । ಬಂಗಾರದಲ್ಲಿ । ತಗೆ ಬಂದೀತು । ಪ್ರಾಚೀನದಲ್ಲಿ ರಾಮ ॥ ೧ ॥ ವಸವಿಕಾರರು । ಯೆಸಗಿಬಂದಾರು ರಾಮ । ಹೊತ್ತಾರೆಯೆದ್ದು । ಊರಿಗೆ ಹೋದಾರು । ರಾಮ ॥ ೨ ॥ ದಾರಿಯಲ್ಲಿ । ಬಹುಜನಕಂಡೆ । ರಾಮ । ಮನಸುನಿಲ್ಲದೆ । ಅವರಲ್ಲಿ ಇದ್ದೆ । ರಾಮ ॥ ೩ ॥ ಧಣಿಯೊಳು । ಪುರಂಧರಾ ವಿಠಲ । ಕೆಟ್ಟ ಸಂಸಾರ । ಬಿಡಿಸೈಯುತ್ತಂದೆ । ರಾಮ ॥ ೪ ॥

ಭಜನೆ

ರಾಗ-ಕಲ್ಯಾಣಿ

ಪೋಪೊಹೋಗೋಣ । ಬಾರೊ ರಂಗ । ಪೋಪೊ ಹೋಗೋಣ ॥ ಪಲ್ಲವಿ ॥ ಜಾಹ್ನವಿಯು । ತೀರವಂತೆ । ಜನಕರಾಯನ । ಕುವರಿಯಂತೆ । ಜಾನಕೀ ವಿವಾಹವಂತೆ । ಜಾಣನೀನು ಬರಬೇಕಂತೆ ॥ ೧ ॥ ಪೌಂಡ್ರಿಕನ ನಗರವಂತೆ। ಶಿಶುಪಾಲನವಲ್ಲಭಳಂತೆ । ನಿನಗೆ ಮಾಲೆಯು ಬರದಳಂತೆ ॥೨॥ ಪಾಂಡವರು । ಕೌರವರು । ಲೆಕ್ಕವಾಡಿ ಸೋತರಂತೆ । ಊರುಬಿಟ್ಟು ಪೋದರಂತೆ । ರಂಗಂವಿಠ್ಠಲ ಬರಬೇಕಂತೆ ॥ ೩ ॥

ಭಜನೆ

ರಾಗ-ಕಾಂಬೋದಿ-ಆಟತಾಳ

ಯಾಕೆಂನಯಿಾರಾಜ್ಯ । ಕೆಳತಂದೆಹರಿಯೇ । ಬೇಕೆಂದುಸಾಬಯಸಿ । ಬರಲಿಲ್ಲಾದೇವಾ ॥ ಪಲ್ಲವಿ ॥ ದೇಶ । ಹಂಚಯುವಿಲ್ಲ । ದೇಹದೊಳುಬಲವಿಲ್ಲಾ।ವಾಸಿಸಂಘಗಳೆಂಬೋ। ಚೊಲಿಮೆಯುಮಗಿಲ್ಲ । ವಾಸುದೇವನೆ ಬಲ್ಲ । ವೀರಾಜ್ಯವೆಲ್ಲ ॥ ೧ ॥ ಬಂಧುಗಳು ಯನಗಿಲ್ಲ ॥ ಯನಗಾರು ಹಿತರಿಲ್ಲ । ಮನ್ನಿಸುವೊ ದೊರೆಯಿಲ್ಲ । ಮನಕೆ ಹಿತವಿಲ್ಲ । ಹೊನ್ನು

ಚಿನ್ನಗಳಿಲ್ಲ । ಜೊತೆಸಿಕೊಡುವರಿಲ್ಲ । ಇನ್ನೇನು ಬೇಕಿನ್ನ ಜೆಕು । ಇದು ಸಮಯವಲ್ಲ ॥ ೨ ॥ ಕರುಣವುಳ್ಳವರಿಲ್ಲ । ಅರಿಸಿಕೊಂಬುವರಿಲ್ಲ । ಕರುಲಾಕ್ಷನಲ್ಲದೆ । ಕಾಯ್ವರಿಲ್ಲ । ಕನಸಿನಲಿ ಕಳವಿಲ್ಲ । ಮನಸಿನಲಿ ವ್ಯಥವಿಲ್ಲಾ । ವನಜಾಕ್ಷ ಪುರಂಧರ ವಿಠಲನಿಬಲ್ಲಾ ॥ ೩ ॥ ಯಾಕಿನ್ನ ಈ ರಾಜ್ಯ ॥

ಭಜನೆ

ರಾಗ-ರೂಪಕತಾಳ

ರಕ್ಷಿಸೋ ಯನ್ನ ದೇವಾ । ರಕ್ಷಣಕರ್ತ್ರಬೇಗಾ ॥ ಪ ॥ ಉಪೇಕ್ಷೆ ಮಾಡುವರೇನೋ । ಬಿರಾಕ್ಷಿತಿಯೊಳಗೀಗಾ ॥ ಅ ॥ ॥ ಪ ॥ ಸರಸಿಜಾಕ್ಷಯಿಂದೂ । ಸರಸದಿಂ ಬೇಗಬಂಧೂ । ಅರಿಷಡ್ವರ್ಗಂಗಳಕೊಂದು । ಆದರಿಸೋದಯಾಸಿಂಧೂ ॥ ೧ ॥ ಸ್ಮರಸೂವೆನಿನ್ನ ನಾಮಾ । ಶರಣಾಗತಭಕ್ತಪ್ರೇಮಾ । ಕಮನೀಯಗುಣ ಸ್ತೋಮಾ । ಕಂಸಾರಿರಿಪುಭೀಮಾ ॥ ೨ ॥ ಶ್ರೀ ಬೆಂಗಳೂರು ಪುರಾಧೀಶಾ । ವೆಂಕಟಾಚಲವಾ । ದಾಸಸಕಸ್ತೂರಿ । ರಂಗಪೋಷಾ । ಕೃಪಪಾಂಗಾ ॥ ೩ ॥ ರಕ್ಷಿಸೋ ಯಂನ ದೇವಾ ॥

ಭಜನೆ

ರಾಗ-ತೋಡಿ-ಆದಿತಾಳ.

(ಶಂಭೋ ಮಹದೇವ ನಿನ್ನಯ ಪಾದ ೧ ಎಂಬಂತೆ)

ತಪ್ಪೇನು ಮಾಡಿದೇನೋ । ಶ್ರೀ ವಾಸವೇಂದ್ರಾ ॥ ಪ ॥ ಪೋಪೋಗೊನಿನಗೆ । ಯನ್ನಪ್ಪ ಕೈ [illegible] ॥ ಅ ॥ ಪ ॥ ಪಾತಕದೊಳಗತಿ । ಪಾತಕೀಯೋ [illegible] । [illegible] ತೆಂನವಾಡಿ ಕೊ । ಅನಾಥಬಂಧುವೆನಾಂ ॥ ೧ ॥ [illegible] ಗಳ । ದೂರಗೈಸುವೆಯೆಂದು । [illegible] । [illegible]

ದಂತೆ ॥ ೨ ॥ ಮಂಗಳಾಂಗನೆ । ಗುರುರಾಮವಿಠಲನೆ । ಬೇಗದಿಂದಲಿ ಬಂದು । ಸಲಹೈಯು ದೊರೆಯೆ ॥ ೩ ॥ ತಪ್ಪೇನು ಮಾಡಿದೇನೊ ॥

ಭಜನೆ (ತೆಲುಗು)

ರಾಗ-ಆದಿತಾಳ

ಹನುಮಂತರಾಯ । ನೂತನಪುರಿ । ಹನುಮಂತರಾಯ ॥ ಪ ॥ ಹನುಮಂತರಾಯವ್ರೋ । ಅಂಜನಿತನಯ ॥ ವರವಜ್ರಕಾಯ । ಭಕ್ತಸಹಾಯ ॥ ೧ ॥ ಶ್ರೀರಾಮದೂತ ಸೃಷ್ಟಿಪ್ರಖ್ಯಾತ । ಹೃದಯನಿವಾಸಿತ । ಸಕಲ ಸಂಗೀತ ॥ ೨ ॥ ದಿವ್ಯ ಫಲಭಕ್ಷಣ । ದೀನಸಂರಕ್ಷಣ । ಜದನಾಪೇಕ್ಷಣ । ಕಲುಷಸಂಹರಣ ॥ ೩ ॥ ಅಷ್ಟಾಂಗಯೋಗಮುಲನ್ನಿಯು । ಲೋಗ । ಸಾಧಿಂಚಿವೇಗ । ಪುನ್ನಾಪುಜಾಗಾ ॥ ೪ ॥ ಅಟ್ಟಿವಿವಾದ ಚೂಚಿ ಆನಂದಮುಜೊಚ್ಚಿ । ರಾಮುನಿಧ್ಯಾನಿಂಚಿ । ಮೆಲ್ಲನೆ ದಿಗಿವಚ್ಚಿ ॥ ೫ ॥ ಪ್ರಭುಡವೈಯುನ್ನಾವು । ರಾಮಕಾರ್ಯಮುನಂದು । ಕಾರಣಕರ್ತುನವು । ಕೋರಿಕೇಲಿತ್ತುವು । ಧರಣಿಯೊಳಗೆ । ನೂತನಪುರಿಯೊಳು । ಸ್ಥಿರವಾಗಿ ನೆಲಸಿರುವ । ಶ್ರೀರಾಮಚಂದ್ರನ । ಹನುಮಂತರಾಯ ॥ ೬ ॥

ಕೃತಿ

ನೀಲಕಂಠಂ ಭಜೇಹಂ । ಸತತಂ । ನೀರಜಾಸನಾದಿ ವಿನುತಂ ॥ ಪಲ್ಲವಿ ॥ ಬಾಲಕುಚಾಂಬಾ ಸಹಿತಂ । ಬಾಲಚಂದ್ರಸೇವಿತಂ । ಶ್ರೀಗುರುಗುಹಪೂಜಿತಂ । ಶ್ರೀ ಕದಂಬವನನಾಥಂ ॥ ಸಾ, ನಿ, ದ, ಪಾ, ಮ, ಗ, ರಿ, ಗ, ರಿ, ಸಾ, । ನೀ ಧಪಮಪ । ನಿಸರಿಮಗರಿ । ರೀರೀಸಾ । ಸಸಾ

ರೀರಿಮಪನಿ ॥ ಪಾಪನಿದಪ । ಮಪನಿಸರಿರಿ । ಮಗಗರಿಸ
ನಿದಪನಿನಿಸಾನೀ ಸರಿಪಾ । ಗರಿಗಾರಿಸ । ನಿಸರಿಗರಿಸ।ಸರಿಸ
ನಿಧಪ । ರಿಸಾನಿಧಪಾ । ಧಪಾಮಗರೀ । ನಿಸಾರಿಮಪ ।
ನಿಸಾಪದನೀ ॥ ೧ ॥ ಅಷ್ಟಯುರೂಪ ಖಂಡಂ । ಕಾವೇರಿ
ತಿರುಕ್ತ್ರಾಭಿಮುಖಂ । ದೃಷ್ಟಿಕಭಕ್ತ ಪ್ರಮುಖಂ । ನಕ್ಷ
ತ್ರೇಶ ಶೇಖರಂ । ನಾಮರೂಪ ವಿಚಿತ್ರಕರಂ । ದಕ್ಷ
ತಾರಕೇಶ್ವರಂ । ಕೇತಾರಗೌಳ ಕ್ರಿಯಾಕರಂ । ದಕ್ಷಿಣ
ಕಾಶೀಪುರಂ । ದಂಡಿತಕಾಮಾತ್ರಿಪುರಂ । ದಕ್ಷಾದ್ವರಹರಂ
ಹರಂ । ದಯಾಕರಂ । ಕಮಲಕರಂ ಸಾನಿದಪಾಮಗರಿಗರಿ
ಸಾ ॥ ೨ ॥

ಭಜನೆ

ರಾಗ-ಹಿಂದುಸ್ತಾನಿ-ಆದಿತಾಳ.

(ಉಮಾಪಿತೃಷ್ಣಾ ಪೊಡವಿಗೊಡೆಯಾ ಎಂಬಂತೆ)

ಸಿರಿಯ ರಮಣಾ । ಚರಣ ನಳಿನಾ । ಸ್ಮರಣೆಯೊಳು
ನೀಂ । ಮನವನಿರಿಸೈ ॥ ಪ ॥ ಪರಮಕರುಣಾ । ಶರನ
ಭಜನಾ । ದುರಿತಹರಣಾ । ಶರಧಿಶಯನಾ ॥ ಗರುಡ
ಗಮನಾ । ಹರಿಯಚರಣಾ । ನಳಿನಯುಗದೊಳ್ । ಮನವ
ನಿರಿಸೈ ॥ ಪ ॥ ಯದುಕುಮಾರಾ । ಮಹಿತಧೀರಾ । ಕೃತಿ
ವಿಚಾರ । ದಶಶರೀರಾ ॥ ೨ ॥ ದುರಿತದೂರಾ । ನಿಗಮ
ಸಾರಾ । ಮಧುವಿದಾರ । ಹರಿಯಸ್ಮರಿಸೈ ॥ ೩ ॥

ಭಜನೆ

ರಾಗ-ಧನ್ಯಾಸಿ-ಆದಿತಾಳ

ಕರುಣಾಕರ ನೀ । ನೆಂಬುವದ್ಯಾಕೆಲೊ । ಭರವಸವಿಲ್ಲ
ವೆನಗೆ ॥ ಪ ॥ ಪರಿಪರಿಯಲಿ ಈ । ನರಜನುಮವನಿತ್ತಿ ।

೩೨ ೧ ಮನ । ಮರುಗುವದನು ಕಂಡು ॥ ಅ ॥ ಪ ॥
ಕರುಣಾಕರ ನೀನಾದೊಡೆ ಈಗಲೆ । ಕರಪಿಡಿದೆನ್ನನು ।
ಹರಿಕಾಯೋ ॥ ಸರಸಿಜಾಕ್ಷನೆ । ಅರಸು ನೀನಾದೊಡೆ ।
ದುರಿತಗಳೆನ್ನನು । ಪೀಡಿಪುದುಂಟೆ ॥ ೧ ॥ ಕರಿ ಧೃವ ಬಲಿ
ಪಾಂ । ಚಾಲಿ ಅಹಲ್ಯೆಯು । ಪೊರೆದವ ನೀನಂತೆ ॥ ಅರಿತು
ವಿಚಾರಿಸಿ । ನೋಡಲು ಎಲ್ಲವು । ಅವು ಬಹು ಕಾಂತಿಗ ।
ಳಂತೆ ಕೃಷ್ಣಯ್ಯಾ ॥ ೨ ॥ ಮರಣಕಾಲದಲಿ । ಅಜಮಿಳ
ಗೊಲಿದೆ । ಗರುಡಧ್ವಜನೆಂಬ । ಬಿರುದಿನಿಂದ । ವರಬಿರುದು
ಗಳ್ ನಿನ್ನೊಳ್ । ಉಳಿಯುಬೇಕಾದರೆ । ತ್ವರಿತದಿ ಸಲಹೊ ।
ಪುರಂದರ ವಿಠಲ ॥ ೩ ॥

ಬನ್ನೇರುಗಿರಿ ಮಹಿಮೆ
ಮತ್ತು
ಶ್ರೀ ಸಂಪಂಗಿರಾಮದೇವರ ಪ್ರಾರ್ಥನೆ

ಭಜನೆ
ರಾಗ-ಬೇಹಾಗ್-ಆದಿತಾಳ
(ಸ್ವಾಮಿದೇವನೆ ಲೋಕಪಾಲನೆ ಎಂಬಂತೆ)

ಬನ್ನೇರುಗಿರಿಯಲಿ । ಜಾತ್ರೆಯೂ । ಅನೇಕಜನರಿಗೆ ।
ಪ್ರೀತಿಯೂ ॥ ವಿನಯಾದಿ ಭಕ್ತರು ನಿನ್ನಯಾ । ಘನದಿ
ಗೈವರು ಸೇವೆಯೂ ॥ ಪ ॥ ವರುಷವರುಷಕೆ ವೊಂದುಸಾರಿ ।
ಹರುಷ ನಡಿಸುತಲಿರುವರೂ ॥ ಮೆರವಣಿಗೆ ಪ್ರತಿದಿನದಿ ಮು
ಖ್ಯರು ಹರುಷದಿಂದಲಿ ಪಾಳ್ವರೊ ॥ ೧ ॥ ಸುವರ್ಣಮುಖಿ
ಯುಲಿ ಸ್ನಾನಗೈಯುಲ್ । ಸರ್ವಪಾಪ ಪರಿಹಾರಗಳ್ ॥

ಪೂರ್ವದೊಳ್ ನವಿತ್ತ್ರಷ್ಟಫಲಗಳ್ । ದೇವಿಕೊಡುತ ಕಾಪಾ
ಡುವಳ್ ॥ ೨ ॥ ಬೆಟ್ಟದಮೇಲೆ ನೃಸಿಂಹನೂ । ಪರಮಾತ್ಮ
ಪಾಪನಕೂಪನೂ ॥ ಕೋರಿದೊರಗಳ ಬಿಡದೆ ಕೊಡುವನು
ಕರಮುಕರುಣದಿ ಪೊರೆವನೂ ॥ ೩ ॥ ಅನ್ನ ಚಕ್ರದರಮಂಟಿ
ಯೊಳ್ । ಪಾನಕಷ್ಟ ಪನ್ನ್ಯಾದಗಳ್ ॥ ಇನ್ನು ರಾಮು
ಗಟಿಗಳಗಳ್ । ಎನುತ ನೀರ್ದ್ವರು ಹರುಷದೊಳ್ ॥ ೪
ಬಸ್ತಿ ಬಕ್ಕಟ್ಟೆ ಪ್ಯಾಟೆ ರಾಜಮಾರ್ಗ । ವೆಂಕಟರಮಣಸ್ವಾಮಿ
ಹಸನಾದ ಮುತ್ತಿನ ಪಾಲ್ಕಿ ಕಟ್ಟಿಸಿ ಹೆಸವಾರ್ಗಿಸಿ ಪಡೆದನೂ
॥ ೫ ॥ ಸೊಂಪಾದ ಭಜನೆಯ ಗುಂಪುಗಳ್ । ಇದರೊಪ್ಪುವ
ಸಮವಾದ್ಯಗಳ್ ॥ ಇಂಪಿನಿಂ ಸಂಗೀತಗಳ್ । ಸಂಸಂಗ
ರಾಮನ ಧ್ಯಾನಗಳ್ ॥ ೬ ॥ ಘೋರೆಂಬೊ ಕಾಳಿಭೆ ರಿಗಳ್
ಬಾರಿಸುವ ನಗಾರ್ಗಳ್ ॥ ಪರಿಪರಿಯ ಬ್ಯಾಂಡುಗಳ್
ಸೇರಿದ ಸರಿತಾಳಗಳ್ ॥ ೭ ॥ ಬಾಣಬಿರುಸಿನ ಮದ್ದಿನಾ
ಗಡ । ಟಪಾಗಳ್ ಮೇಲಾಪ್ಪದೂ ॥ ಕೆಡ್ಡಿ ಪ್ರಿಯ
ಹೂಗಳ್ । ನಾನಾ ಬಣ್ಣದಿ ತೋರ್ಪುದೂ ॥ ೮ ॥ ಇಂತು
ನಿಮ್ಮಯ ಮಹಿಮೆಗಳ । ನಾನೆಂತು ವರ್ಣಿಪೆ ದೇವನೇ ।
ನಿಂತುಕೇಳುವೆ ಮುದ್ದುದಾಸನ । ಸತತ ರಕ್ಷಿಸೋ ಬೇ
ಗನೆ ॥ ೯

ಭಜನೆ

ರಾಗ- ಕಾಂಬೋಧಿ- ಆದಿ ತಾಳ

ಎಂಥಾ ಪಾಪಿ ದೃಷ್ಟಿ ತಾಗಿತು । ಗೋಪಾಲಕೃಷ್ಣನಿ
ಯಾವ ಪಾಪಿ ದೃಷ್ಟಿ ತಾಗಿತು ॥ ಪ ॥ ಶಿರವು ಸಡಿಲಾ
ನೆಂದು ಗೋಪಿ । ನೊಸಲು ಒಡೆಯುತ್ತಿರಲು ನೋಡಿ ।

ಕಸುಳಿ ಬಾಲರ ದೃಷ್ಟಿ ತಾಗಿ । ನೊಸರು ಕುಡಿದುದೆಲ್ಲಾ॥
೧ ॥ ಕೃಷ್ಣ ಹಸಿದಾನೆಂದು ಗೋಪಿ । ಬಟ್ಟಲೊಳಗೆ ಕ್ಷೀರ
ವಿಡು । ಕೊಟ್ಟ ಬಾಲರ ದೃಷ್ಟಿ ತಾಗಿ । ಕೊಟ್ಟ ಹಾಲು
ಚೆಲ್ಲಿದೆ ॥ ೨ ॥ ಚಿಣ್ಣ ಹಸಿದಾನೆಂದು ಗೋಪಿ । ಬೆಣ್ಣೆ
ತುಪ್ಪ ಕೊಡಲು ಹೋಗೆ । ಸಣ್ಣ ಬಾಲರ ದೃಷ್ಟಿ ತಾಗಿ ।
ಬೆಣ್ಣೆ ಬಿಸಿಯಾಯಿತೆ ॥ ೩ ॥ ಅಂಗಿಟೋಪಿ ಉಂಗುರವಿಟ್ಟು ।
ಚಿಣ್ಣಗೆ ಶೃಂಗರಿಸಿ । ಅಂಗಳದೊಳು ಆಡೋ ಕೃಷ್ಣಗೆ ।
ಹೆಂಗಸರ ದೃಷ್ಟಿಯೇನೋ ॥ ೪ ॥ ಮಲ್ಲಿಯುಡಿಸಿ ಮಲ್ಲೆ
ಮುಡಿಸಿ । ಚೆಲುವ ಕೃಷ್ಣಗೆ ತಿಲುಕವಿಟ್ಟು । ಮುದ್ದುಗೋಪಾ
ಲ ವಿಠಲಗೆ । ಪುಣ್ಯವಂತೆಯರು ನೋಡುವರೇನೋ ॥ ೫ ॥

ಭಜನೆ

ಆರಿಲ್ಲಾರಿಲ್ಲಾ । ಸುಖವಿಲ್ಲಿಲ್ಲಿಲ್ಲಿಲ್ಲಾ ॥ ಪ ॥
ಮುಳ್ಳಿನ ಸಂಸಾರ । ಮಾಯದ ಭ್ರಾಂತಿಗೆ । ಮಳ್ಳತಾಗಿ
ನೆನೆಸಂಗೇ ನಿಶ್ಚಯವು ॥ ೧ ॥ ದೊತ್ತವು ತೀರಿದ ಕಾಲಕ್ಕೆ ।
ನಿನ್ನಯ ಮಕ್ಕಳು ಮರಿಗಳು । ಲೆಕ್ಕಕೆ ತರುವವರಲ್ಲ ॥ ೨ ॥
ಅಂಗನೆ ಮಕ್ಕಳು । ಅವಿಹಿತಬಾಂಧವರು । ಸಂಗಡ ಬರುವ
ವರಲ್ಲಾ ॥ ತಿರುಪತಿ ವೆಂಕಟ । ರಮಣನು ಅಲ್ಲದೆ । ಕರು
ಣಿಸುವರ್ಯಾರ್ರೈಯ್ಯ ॥ ಆರಿಗಾರು ಲೋಕದಿ । ಕಾಯುವವ
ರಲ್ಲಿಲ್ಲಾ ॥ ೩ ॥

ಭಜನೆ

ಸಕಲ ಗ್ರಹಬಲ ನೀನೆ ಸರಸಿಜಾಕ್ಷ । ನಿಖಿಲವ್ಯಾಪಕ
ನೀನೆ ವಿಶ್ವವ್ಯಾಪಕ ಮಹಿಮ । ಸಕಲ ಗ್ರಹಬಲ ನೀನೆ

ಸರಸಿಜಾಕ್ಷ ॥ ಪ ॥ ರವಿ ಚಂದ್ರ ಬುಧ ನೀನೆ । ರಾಹು ಕೇತುವು ನೀನೆ । ಕವಿ ಗುರು ಶನಿಯು । ಮಂಗಳನು ನೀನೆ । ದಿನ ರಾತ್ರಿಯು ನೀನೆ । ನವವಿಧಾನವು ನೀನೆ । ಭವರೋಗಹರನು ನೀನೆ । ಭಕ್ತವತ್ಸಲನೆ ॥ ೧ ॥ ಸಕಲ ಪಕ್ಷ ಮಾಸವು ನೀನೆ । ಪಕ್ಷಕಾಲವು ನೀನೆ । ನಕ್ಷತ್ರ ಯೋಗಕರಣಗಳು ನೀನೆ ॥ ಅಕ್ಷಯದಿ ದ್ರೌಪದಿಯ । ಮಾನ ಕಾಯ್ದವನು ನೀನೆ । ಪಕ್ಷಿವಾಹನ ದೀನರಕ್ಷಕನು ನೀನೆ ॥ ೨ ॥ ಋತುಕಾಲಗಳು ನೀನೆ । ವ್ರತದಿನಂಗಳು ನೀನೆ । ಕ್ರತುವು ಸಂಧಾನ ಸದ್ಗತಿಯು ನೀನೆ । ಮಾತೃ ಪಿತೃ ಗುರು ನೀನೆ । ಪುರಂದರ ವಿಠಲನೆ । ಶೃತಿಗೆ ಸಿಲ್ಕದ ಮಹಾತ್ಮನು ನೀನೆ ॥ ೩ ॥

ಮಹಾರಾಷ್ಟ್ರ—ಭಜನೆ

ರಾಗ-ಶಂಕರಾಭರಣ–ಆದಿತಾಳ

ಕಧಿಕರತಿ । ಲಗ್ನಮಾಜೆ । ತುಜರಾವೆ । ಈಶ್ವರಾ ॥ ಪ ॥ ವಾಡಲೀ ವುಂಚಹೀಕತಿ । ಹಸುನಿಬೋಲತಿ । ನಾಕಮುರುಡತಿ । ಸ್ತ್ರೀಯಾಂ ಪರಭಾರ ॥ ೧ ॥ ಮೈತ್ರಿ ನಿವದರಿಟೋಚುನಿ । ಶಬ್ದಕೇಮುನಿ । ಜಾತಭೇದುನಿ । ಚುರೀಚಾದಾರ ॥ ೨ ॥ ಜನಕತೋನಾವಕಾಡಿನ । ಮಾಯ ಸುಚುವಿಸ । ಹಂಸಮುಜಕುಣ । ಕೋಣಜನಾರ ॥ ೩ ॥

ಭಜನೆ
ರಾಗ–ಶಂಕರಾಭರಣ–ಆದಿತಾಳ

ಮುದ್ದೂ ಕುಮಾರಯ್ಯಾನೆ । ಭಕ್ತಾ । ಕಾರುಣ್ಯ ಯ್ಯಾನೆ। ಮುದ್ದೂ ॥ ಪ ॥ ಕಾಲಕಾಲ ನರುಪಾಲ ದೀನ ಪರಿ । ಪಾಲಲೋಲ । ಮೂಲಾ ॥ ಕರುಣಾಲವಾಲ ಪಾಲ ॥ ಬಾಲಮುದ್ದೂ ॥ ೧ ॥ ಚಿತ್ತರಂಬು ಶಿವಶಕ್ತಿ ಭಕ್ತಿ ಯೊಳು । ಚಿತ್ತಬಕುಳನಾದ ॥ ಉತ್ತಮಯನೆತ್ತಿ ಓಡಿ ಪೋದ ॥ ೨ ॥ ಆಶೆಯಾದ ಗೃಹದಾಸದಾಸ । ಮುರು ಗೇಶ ಪಾಪನಾಶಾ. ॥ ಅಂಬರ ವಿಶ್ವಾಸ ಸುಪ್ರಕಾಶ ॥ ಲೇಶ ಮುದ್ದೂ ॥ ೩ ॥

ಭಜನೆ
ರಾಗ–ಅಟತಾಳ.

ನೂತನಪುರಿರಾಮಾ । ದೂತಾಂಜನೇಯು ॥ ಪ । ಖ್ಯಾತಿಗವೇಶಿನಾ । ಕರುಣೆವಿಧೇಯಾ । ಅ ॥ ವಾಯು ನಂದನಾ । ಪಾದಾ । ವಾರಿಧಿಗಂಭೀರಾ । ಬಾಯಿಕನಂ ನೇಲು । ಪಾಪಸಂಹಾರಾ ॥ ೧ ॥ ಕಪಿಕುಲೋತ್ತಮ ರಾಮಾ । ಕಾರ್ಯಧುರೀಣ ಕೃಪೆಜೂಡರಾ । ಮಕರ ಕುಂಡಲಾಭರಣ ॥ ೨ ॥ ಶರಧಿಲಂಘಿಂಚಿನ । ಚಿರವಜ್ರ ಕಾಯು । ಸಮರ್ಥಫಲದಾಯು । ಸಂಜೀವರಾಯು ॥ ೩ ॥ ಲಂಕಾಗಾಲ್ಚಿನ । ನೀ । ಜಲಾಕ್ಷವಶಾರ । ಪಂಕಜಾಕ್ಷಿ ನೀ । ಗನ್ನ ಪರಮಪುದಾರ ॥ ೪ ॥ ತಾರಕಮಂತ್ರ ಸುಧಾರಸಪಾಂಗಾ । ವೀರಶೇಖರ । ಸುರವಿನುತನಿಧಾನಾ ॥ ೫ ॥ ರಾಮಾಗಿರಿವಿಹಾರಾ । ರಣಚೀಯೆ ಶೂರಾ । ರಾಮದಾಸುನಿ । ಜ್ಯೋತಿಸಾಮಿನಿಟೀರಾ ॥ ೬ ॥

ಭಜನೆ

ರಾಗ-ಮುಖಾರಿ-ತ್ರಿಪುಟತಾಳ

ಆರು ಬಿಡುಕಿದವ್ರೈಯ್ಯ ಹರಿ ನಿನ್ನ [illegible] । [illegible]
ಈ ಧರೆಯೊಳಗೆ ಒಬ್ಬರ ಕಾಣೆ । ಕೃಷ್ಣಾ ॥ ಪ ॥ [illegible]
ಬಾರದ ಮಾನ್ಯ ಅರ್ಜುನನೊಬ್ಬನ ಹೊಂದಿ । [illegible]
ಕೌರವರ ಬಲವ ಮುರಿದೆ । ನೆಲವ ಬೇಡಲು [illegible]
ಯು ಭೂಮಿಗೆ ಇಳಿದೆ । ಮೊರೆಯು [illegible]
ನಿಂದು ಕೊಂಡೆ ॥ ೧ ॥ ಕೆಂಗಳೊಳಗೆ [illegible]
ಹಂಸಧ್ವಜನ । ಮಗಳ ಗಂಡನ [illegible]
ಮುರುಳು ತನದಲಿ ಪೋಗಿ ಭೃಗುಮುನಿಯು [illegible]
ಅರಿತು ನರಕಾಸುರನ ಹೆಂಡತಿಯು ತಂದೆ ॥ ೨ ॥ [illegible]
ಬೊ ದಾಸರ ಕೈಲಿ ಕಷ್ಟವನು ಕಟ್ಟಿಸಿಕೊಂಡೆ । [illegible]
ಚಾರ್ಯ ಶ್ರೀಗುರುವೆ ಬಲ್ಲ । [illegible]
ಮಿಷ ಭಜಿಸುತಲಿ ತಿರಿದೇನೆಂದರೆ ತಿರುವೆ [illegible]
ಕೃಷ್ಣಾ ॥ ೩ ॥

ಭಜನೆ

ರಾಗ ತೋಡಿ-ಅಟತಾಳ

ದಾಸನೆಂದೆನಿಸೋ । ಯನ್ನ । ಶ್ರೀರಾ ಸರ್ವ[illegible]
॥ ಪ ॥ ಲೇಸು ಸುಖವ ಕಾಣೆ । ಇನ್ನು ಈ ಜಗದೊಳು [illegible]
ದೇವರದೇವ ರಂಗ ಪಾಲಿಸೊ ಮೋಹನಾಂಗ ॥ ಅ ॥ [illegible]
ಗೋಸ್ಕರವಾಗಿ । ಪಿತ [illegible]ನ ತಿರುಗಿ । ನಿಂತಕ್ಕೆ [illegible]

ಗಾಗಿ । ಟಕ್ಕಿಗೆ ಬೆರಗಾದೆ । ಆಶೆಯಿಂದಲಿ ಪರರ । ಬಾಗಿಲಿಗೆ ಪೋಗಿ । ಈಗ ಪರರಶೇವೆ । ಗೈದೆನೊ ಹೊಟ್ಟೆ ಗಾಗಿ ॥ ೧ ॥ ಸ್ನಾನಸಂಧ್ಯಾವಂದನಾದಿ । ಕರ್ಮಗಳಿಲ್ಲ । ಗುಣನಿಧಿಯೊಬ್ಬ । ನಾಮರಿತೇನಲ್ಲ । ಹೀನವಿಷಯಂಗಳು । ಮನಸಾರಿ ಸೋತೆನಲ್ಲ । ಏನುಮಾಡಲಿ ದೀನವತ್ಸಲ ಗೋಪಾಲ ॥೨॥ ಮಾನುಷ್ಯಜನ್ಮವು । ವ್ಯರ್ಥವಾಯಿತಲ್ಲ । ಮಾನವರಿಗೆ । ಕೈಮುಗಿದೆನಲ್ಲ ॥ ಸ್ವಾನಸೂಕರನಂತೆ ॥ ಕೊರಗಿ ಬೆಂಡಾದೆನಲ್ಲ । ಎನ್ನ ಪೊರೆವೊರಿಲ್ಲ । ಪ್ರಾಣೇಶವಿಠಲ ॥೩॥

ಭಜನೆ

ರಾಗ-ಹಿಂದುಸ್ಥಾನಿ-ಕೋಡಿ-ಅಟತಾಳ

(ದೀನಜನೋದ್ಧರ ರಾಮಾ ಎಂಬಂತೆ)

ಸಾಧುಜನೊದ್ಧರ । ರಾಮಾ ! ಗುಣಧಾಮಾ । ಬಲ ಭೀಮಾ । ಶ್ರೀರಘುರಾಮಾ ॥ ಜನನಮರಣ । ಸಂಭಾರ್ಗಸುನಾಮಾ । ಸಕಲಲೋಕಾಭಿ ॥ ರಾಮಾ ಗುಣಧಾಮಾ । ಗುಣಶ್ಯಾಮಾ।ಬಲಭೀಮಾ । ರಘುರಾಮಾ ॥ ಶೀತಾನ್ವೇಷಣ ಚಿಂತಿತ ರಾಮಾ । ಯೋ ರಾಮಾ । ಸಕಲಲೋಕಾಭಿ । ರಾಮಾ ಗುಣಧಾಮಾ । ಘನಶ್ಯಾಮಾ । ಬಲಭೀಮಾ । ರಘುರಾಮಾ ॥ ಸಕಲಜೀವ ರಕ್ಷಿತ । ಕೃಷ್ಣಮುರಾರಿ । ಶಂಖುಚಕ್ರಗಧಾ । ಪೀತಾಂಬರಧಾರಿ । ಮುರಾರಿಶೌ ॥ ಸಕಲಲೋಕಾಭಿರಾಮಾ । ಗುಣಧಾಮಾ ॥

ಕನಕದಾಸರಿಂದ ವಿರಚಿತ ಪೂರ್ವಾರ್ಚಿತಂಗಳನ್ನು ತಿಳಿಸಿರುವ

ಆತ್ಮಾವಿಚಾರ ತತ್ವ.

ಭಜನೆ—ರಾಗ—ಕೇದರಗೌಳ.

ಯಚ್ಚರದಲಿ । ನೋಡು ಮನವೆ। ಮುದ್ದು ಅಚ್ಯು । ತ ದಾಸರ ಕೂಡಿ ನಾಚರುವೆ ॥ ಯಚ್ಚರ ।ಪ॥ ಧರ್ಮವ ಮಾಡುವನಿಲ್ಲಿ । ನಿ ನಗೆ ಬ್ರಹ್ಮನ ॥ ಸಭೆಯು ಕೊಡುವರು ಅಲ್ಲೀ । ಕರ್ಮಯೋಜನೆಗಳು ॥ ಯಿಲ್ಲಿ । ಚಿನ್ನ ಚರ್ಮವ । ಸುಲದು ತಿಂನಿಸುವಾರು ಅಲ್ಲಿ ॥೧॥ ಪಂಗ್ತಿ ವಂಚನೆ ಮಾಡುವದಿಲ್ಲೀ । ಪಾಪ ಹಿಂಚಿನ ಪುಡಿಯು । ತಿನ್ನಿಸುವಾರು ಅಲ್ಲಿ ಸಂಚಾಸ್ತ್ರಕ [illegible] ವದಿಲ್ಲಿ। ಕೊಚ್ಚಿ ಕಾಳಂಚಿಕಿ ಡಿವಾರು ಯಮದೂತರಲ್ಲಿ ಯಚ್ಚ ॥೨॥ ಮುದ್ದು ಮಂತ್ರ ಗೂಡಕಿ ಯಿಲ್ಲಿ । ರಣಹದ್ದು ಸಿಕ್ಕಿಲಿ । ತಿನ್ನಿಸುವಾರು ಅಲ್ಲೀ । ಜ್ಞಾನಭಕ್ತಿಯು ವಡುವದಿಲ್ಲಿ । ಬಾಲಕೃಷ್ಣ । ಬಂದಿಹನೆಂದು। ಕೊಂಡಾಡುವರಲ್ಲೀ । ಯಚ್ಚ ॥೩॥ ಪುರುಷಗೆ । ವಂಚನೆ ಮಾಡೋದಿಲ್ಲೀ । ನಿನ್ನ ಶಿರವ । ಕೊಯಿದು । ಚಂಡಾಡುವರಲ್ಲಿ ॥ ಅರಸಮರಸದೆ ।ನೀಡುವದಿಲ್ಲೀ । ಪಟ್ಟದರಸಿ । ಬಂದಿಹಳೆಂದು।ಕೊಂಡಾಡುವರಲ್ಲೀ ॥ ಯೆಚ್ಚರ॥೪॥ ಬಟ್ಟೆ ಕೆಂಚ ದನೋಟಾ । ಇಲ್ಲಿ । ನಿನ್ನ ಕೈಕಟ್ಟಿ । ಕೊಲ್ಲಿಸೋರು । ಯಮಪುರದಲ್ಲೀ । ನಿಷ್ಠೆಯೊಳಿರುವದಿಲ್ಲೀ । ಬಲು ಕೃಷ್ಣ ಬಂದಿಹನೆಂದು । ಎದರುನೋಡುವರಲ್ಲೀ । ಯ ।॥೫॥ ಮೋಸಮಾಡುವದಿಲ್ಲೀ । ಬಹಳ ಸೀಸಕಾಸಿ । ಬಾಯೊಳು ಹೊಯ್ಯುವರಲ್ಲೀ । ಹಸಿದಾಸರ ಪೂಜೆ ಮಾಡೋದಿಲ್ಲೀ । ನಮಗೆಗ ಲಿಂಗಮಾನು । ಸೇವೆ ದೊರಕುವದಿಲ್ಲೀ ।೬॥ ನೀಚತನ ಮಾಡುವದಿಲ್ಲೀ । ದೊಡ್ಡ ಜಾತಿಯಿಂದಾ ।

ಕವರುವರು । ಯಾಚಕರಂನ । ಬೈಯ್ಯೊದಿಲ್ಲೀ । ನಿನ್ನ
ನಾಚಿಕೆಯುಸ್ಸ । ಕಳೆಸು ನಾಲಿಗೆ ಕಿಳ್ವೋರಲ್ಲೀ ॥೭॥
ಮೊದ್ಯಕ್ಕಿ ಕೊಲ್ಲುವದಿಲ್ಲೀ । ನಿನ್ನ ಪೊದ್ದೊದ್ದು । ನಾಲಿ
ಗೆ ಕೀಳುವರಲ್ಲಿ । ಷ್ಟ್ರಬುಧ್ಧಿಯು । ನಡೆಸುವದಿಲ್ಲೀ ।
ದೊಡ್ಡ ಗುದ್ದಲಿಕಾಶಿ । ಬೆನ್ನೊಳು ಹೇರುವರಲ್ಲೀ ॥೮॥
ಅತ್ತೆಮಾವನ । ಬೈಯ್ವೊದಿಲ್ಲೀ । ನಿನ್ನಕತ್ತರಿಸಿ । ಗರಗ
ಸದೊಳು । ಕುಯ್ಯುವರಲ್ಲೀ । ಅತ್ತೆಮಾವನ । ಪೂಜೆ
ಸೋದಿಲ್ಲೀ । ಯಿವರುತ್ತಮರೆಂದು । ಕೊಂಡಾಡುವರಲ್ಲೀ
॥೧೦॥ ಗಂಡನಬೈಯ್ಯುದಿಲ್ಲೀ । ನಿನ್ನ ತುಂಡ ತುಂಡಾಗಿ॥
ಇಡಿವಾರು ಅಲ್ಲೀ । ಪುಂಡತನವನು । ಮಾಡುವದಿಲ್ಲಿ ।
ಬೆಂಕಿಕೆಂಡಗಳ । ತಂದು ; ಬಾಯೊಳು ಹೊಯ್ಯುವರ
ಲ್ಲೀ । ಯಚ್ಚ್ಯಾರ ॥೧೧॥ ಪರರನಿಂದೆಯು । ಮಾಡುವದಿಲ್ಲಿ।
ನಿನ್ನ ಶಿರವ ಕೊಯಿದು । ಚಂಡಾಡುವರಲ್ಲೀ । ಪರರಿಗೆ
ಉಪಕಾರವು ಇಲ್ಲೀ । ನಿನಗೆ । ದೊರೆತನಕೊಟ್ಟು । ಕಳು
ಹಿಸುವರಲ್ಲೀ । ಯಚ್ಚ್ಯಾರ ॥೧೨॥ ಗುರುಪಾದಸೇವೆಯು।
ಇಲ್ಲೀ । ನಿನಗೆ ಬ್ರಹ್ಮನ ಸಭೆ ತೋರುವರು । ಅಲ್ಲೀ
ಗುರುವು ನಿಂದಿಸಿ ಬೈಯ್ವೊದಿಲ್ಲೀ । ನಿನ್ನ ಹಿರಿಯನರಕಾ ।
ದಲ್ಲಿ । ತುಳಿವಾರು ಅಲ್ಲೀ ॥ ಯಚ್ಚ್ಯಾರ ॥ ೧೩ ॥ ಹೊನ್ನು
ಪೊನ್ನು । ಧರ್ಮಇಲ್ಲೀ । ಚನ್ನಕೇಶವನ । ಹೊಗಳುವ
ದಿಲ್ಲೀ । ಪ್ರಸನ್ನ ಕನಕದಾಸರೆಂಬುವರಲ್ಲೀ ॥ ಯಚ್ಚ್ಯಾರ ॥
॥೧೪॥ ಮತಿಕೆಡದಿರು । ಮನದಲ್ಲೀ । ನೀ ಅನಾಥ ವಾಗೋ
ಕಾಲಕ್ಕೆ । ಹಿತವಬ್ಬರಿಲ್ಲಾ । ಯಚ್ಚ್ಯಾರದಲಿರು ಮನವೇ ।
ಮುದ್ದು ಅಚ್ಚುತ । ದಾಸರ ಕೂಡಿ । ಸಾಬರುವೆ ॥ ೧೫ ॥

ಭಜನೆ

ರಾಗ-ಮುಖಾರಿ-ಚಾಪು

ಕಾಳಾಬೆಳದಿಂಗಳೂ । ಯೀಸಂಸಾರ । ಕತ್ತಲೆ ಬೆಳು ದಿಂಗಳು ॥ಪಲ್ಲವಿ॥ ಉಂಟಾದಕಾಲಕ್ಕೆ । ನೆಂಟಾರು । ಯಿಷ್ಟಾರು । ಬಂಟರಾಗಿ । ಬಾಗಿಲು ಕಾಯ್ವರೂ । ವುಂಟಾದ ದಿನತಪ್ಪಿ । ಬಡತನಬಂದರೆ । ವಂಟಿಹಾಂಗೆ । ನೊರೆತಿರು ಗೂವರ್‍ಯ್ಯಾ ॥೧॥ ಹಿಡಿಗೆಯು । ಭಕ್ಷಕ್ಕೆ । ಗಡಿಗೇಯು । ತುಪ್ಪಕ್ಕೆ । ಸಡಗಾರದಿಂ । ಮನೆದುಂಬಾ । ಸರಿನೆಂಟಾರೂ ಸಡಗಾರದಿನತಪ್ಪಿ । ಬಡತನಬಂದರೆ । ಶಿಡಿಮುಡಿಮಾಡುತ್ತ । ನಡಿನಡಿಯೆಂಬುವರೂ ॥೨॥ ಯೇರುದಂಡಿಗೆ । ನೂರಾರು ಸಾವಿರ । ದಂಡವುಕೊಟ್ಟರೆ । ರಂಗವಿಠಲ । ನಾನೆ ನರಿಯೆಂಬೊರ್‍ಯ್ಯಾ ॥೩॥

ಆತ್ಮಾವಿಚಾರದ ಕತ್ವಾ.

ರಾಗ-ಭೈರವಿ-ಝುಂಪೆ ತಾಳ

ಯಾರು ಯಿಕ್ಕುವರೆಂದು । ಹಾರೈಸುವೆ । ಆತ್ಮಾ । ಸೋರುತಿದೆ ಮನೆಯಲ್ಲ । ನಾರುತಿದೆ ಸ್ಥಳವು ॥ಪಲ್ಲವಿ॥ ಒಲೆಯೊಳಗೆ । ಯುರಿಯಿಲ್ಲ । ಜಲವಿಲ್ಲಭಾವಿಯೊಳು । ಕಲಹಮಾಳ್ಪಳು । ತನ್ನ ಕುಲವನಿತೆಯು । ಹೊಲವುಪಪ್ಪಿಯೆ । ಯಿಲ್ಲಿರಬಹುದೆ ನೀನೀಗ । ಫಲವುಳ್ಳ ಮನೆಗಳನು । ಸೇರೆಲವೊ ಆತ್ಮಾ ॥೧॥ ಬಾಗಿಲಿಲ್ಲದ । ಮನೆಯು । ಬಹಳ ಕಗ್ಗತ್ತಲೆಯು । ಕೂಗುವದು । ಹುಲಿ [illegible] । ಯುದಿರಿನೊಳಗೆ॥ ಬೇಗದೊಳು । ಯಿಲ್ಲಿಂದ । ಸಾಗುವದೆ [illegible] । ನಾಗಶಯನನ । ಗುಡಿಯ ಸೇರೆಲವೊ ಆತ್ಮಾ ॥೨॥ ಎಟ್ಟಿನಡಿಗೆ

ಒಳಗೆ । ಇಟ್ಟಿರ್ದ ಬುತ್ತಿಗಳು । ಕಟ್ಟ ಕ್ರಿಮಿಗಳಿ ಬಂದ್ವು
ಬಹಳ ಹಸಿದವು ॥ ಬಟ್ಟೆಬಿಡುವವರಿಲ್ಲ । ಹುಟ್ಟಿ ಬಳಸುವ
ರಿಲ್ಲ । ಹೊಟ್ಟೆ ತುಂಬುವದುಂಟೆ । ದುಷ್ಟರೊಳು ಆತ್ಮಾ ॥೩॥
ಹಾಳು ಮನೆ ಇದನು ನಿನಗೆ । ತೋರಿಕೊಟ್ಟವರ್‍ಯಾರು । ಬೀ
ಳುವದು ಮೇಲೆ । ಕದಿಸಾರು ಭಕ್ತಿಗಳು । ಏಳು ಇಲ್ಲಿರಬೇ
ಡ । ಕಾಳಸರ್ಪನು ಬಂದು । ಕಾಲಕಚ್ಚುವನಲ್ಲೊ । ಯಲೆ
ದುಷ್ಟಾತ್ಮಾ ॥೪॥ ಮೂರು ಮಾತನು ಮೇಲೆ । ಯಾರ ಕೂ
ಡಾಡಿದೆಯೋ । ಆರು ಪಥದಲಿ । ನೀನು ವಿಚಾರಿ ನಡೆದೆ ॥
ಕೇರಿಯವನಾಗಿರ್ದ । ಹದಿನೆಂಟು ಅಂಗಡಿಯೊಳಗೆ । ಆರವ್ಯಾ
ಪಾರವನು । ಮಾಡಿದ್ಯೆ ಆತ್ಮಾ ॥೫॥ ಹತ್ತು ತಾಸಿನಮೇಲೆ ।
ಕುತ್ತು ಕೊಡ ಮಮಯರ್ಗಳು । ಬಿತ್ತುವುದು ಕೈಲಿಲು । ಬ
ಳಿಕೆಯೊಳು ॥ ಮತ್ತೇಳು ಮಂದಿ । ತಾವತ್ತತ್ತ ಸಾರುವ
ರು । ಶತ್ರುಗಳನಾ । ಕಾಣೆ । ನೀಕೇಳೆಲೋ ಆತ್ಮಾ ॥೬॥
ಎಂಟುಮಂದಿಯು । ತನಗೆ ನೆಂಟರೆಂಬಾಶೆಯೊಳು । ಗಂಟೆ
ಕಟ್ಟಿಯು ಮನದಿ । ಮುದುಗುತಿರಲು ॥ ಗಂಟಲೊಣಗಿಯು ।
ವಾಯುಕಂಠದೊಳು ಪೋಪಾಗ । ನೆಂಟರನು ನಾಕಾಣೆನಾ ।
ಲಿಸ್ಯೆಯ್ಯಾತ್ಮಾ ॥೭॥ ಆಯುವಿಲ್ಲದ ಮನೆಯು । ಛಾವಣಿಸ
ದ ಮಡದಿ । ಧಾತುವಿಲ್ಲದ । ಪ್ರಾಣ ಕಠಿಣವು ॥ ಬಾಯು
ಹೊಯ್ಯಂಬರೊಳು । ನ್ಯಾಯಸೇರುವದೆ । ವೃಥಾಯುದಲಿ
ಸಾರೆಲವೋ । ಸಾರಿದೆನು ಆತ್ಮಾ ॥೮॥ ಮೂಡಲಗಿರಿವಾಸ
ನೊಳು । ಬೇಡಿಕೊಂಡರೆ ನಿನಗೆ । ನೀಡುವನು ಧರ್ಮವನು
ಧೈರ್ಯವಾಗಿ ॥ ಬೀಡುಬಿಟ್ಟಲ್ಲಿಂದ ಪೋಡುವುದು । ಸುಖ
ದೊಳಗೆ । ಕೊಡುವುದು । ವರಹ ತಿಮ್ಮಪ್ಪನೊಳು ಆತ್ಮಾ
॥೯॥ ಯಾರು ಇಕ್ಕು ॥

ಮಹಾರಾಷ್ಟ್ರ

ಭಜನೆ-ರಾಗ-ಆದಿತಾಳ

ಪಾಂಡುರಂಗಕಾರಾ । ಚಕ್ಷುರ । ಮಂಶರ । ಪಾವನ ಲೋಕಾಶೀ । ಅಜೀರಾಂ । ಪಾವನಲೋಕಾಶೀ ॥ಪಲ್ಲವಿ॥ ಏಕವಾರಮುಖಿ । ಜಪಿತೋಪ್ರಾಣ್ಯ । ಸೈಲಕಡಲಕಾಶೀ । ಅಜೀರಾಂ ಸೈಲಕಡಲಕಾಶೀ ॥೧॥ ತುಂಚಿರಂಜೀವ । ಕಲ್ಯಾಣರಪೋರವ । ಕಥಾಸುರಸಪೀಯ್ಯೋ ॥ ಅಜೀರಾಂ । ಕಥಾಸುರಸಪೀಯ್ಯೋ ॥೨॥ ಹರಿಕೀರ್ತನಸೇ । ಸಾಧುರಿ ಸಜ್ಜನ್। ಬಹುತಭರಸಜೀಯ್ಯೋ । ಅಜೀರಾಂ । ಬಹುತಭರಸಜೀಯ್ಯೋ ॥ ೩ ॥ ಸತ್ಸಾದಾದಪಾಸಿ । ನಿರಮಲ್ ।ಗಂಗಾಜಲಗೈರಾ । ಅಜೀರಾಂ ಗಂಗಾಜಲಗೈರಾ ॥ ೪ ॥ ಹುಂಡಮಂದಿರಾ । ಮಹಾಲ್ ಸುನೇರಿ । ಮಹಾಮುಲಕ । ಭಸ್ತೀ ಅಜೀ ಅಜೀರಾಂ । ಮಹಾಮುಲಕ ಭಸ್ತೀ ॥೫॥ ಢಮರುಗರ್ಜನಾ ಜಟಾಯುಘಡಸೇ । ಕೋಹಿನಹಿ । ಲಂಗಾ ಅಜೀರಾಂ । ಕೋಹಿನಹಿಲಂಗಾ ॥೬॥ ರಾಗರಂಗಸೇ । ಭಾಗಭಾಗೀಜ । ರುಪೈವನ್ನಮಾರಾ ॥ ಅಜೀರಾಂ । ರುಪೈವನ್ನಮಾರಾ ॥೭॥ ಅಮೃತ್ ರಾವ್ ಕೀ । ಅಮೃತ್ ಭಜನ್ ಸುನೋ । ಸದಾಮದನರೈಯ್ಯೋ । ಅಜೀರಾಂ । ಸದಾಮದನರೈಯ್ಯೋ ॥೮॥

ಭಜನೆ.

ರಾಮಶ್ರೀರಘು । ರಾಮರಾಮ । ಸುಮಶರಶತಸಮ ರಾಮಸುನಾಮ । ಭುವಿಧವಮಾ । ಪ್ರೇಮರಾಮ ॥ ಸುಮಶರಶತಸಮ । ಶ್ರೀವರಹರೀ । ದೇವದೇವ । ಭವಭಯಹರಿರಘು । ರಾಮಸುನಾಮ । ರಾಮಜಗದಭೀ । ರಾಮರಾಮ ಭವಭಯಹರಿರಘು । ರಾಮಸುನಾಮ । ರಾಮಶ್ರೀರಘು ॥

ಭಜನೆ-ರಾಗ-ಝಂಪೆ ತಾಳ.

ಪತಿಯಿಲ್ಲದಾನಾರಿ । ನೋಟಕ್ಕೆಮಾರಿ ॥ಪಲ್ಲವಿ॥ ಹೆತ್ತವಳ ಎದೆಯಕೊರಳ । ಕೊಯ್ದಂತಮಾರಿ ॥ಅ॥ ಮಾತುಕಲಿತಿದ್ದತೇನು । ಮನೆಜಾಣೆಯಾದರೇನು । ಅತಿಚಾತುರ್ಯವಿದ್ದರೇನು । ಮುಖಕೆಟ್ಟ ಜನ್ಮಪೊತ್ತು । ಫಲವೇನು ॥೨॥ ಮಗನೆತ್ತತಾಯಿಗೆ । ಮಾರಿಯೆಂತೆಂಬುವರು । ವಡಹುಟ್ಟಿದವರು । ದೂಷಿಸುವರು । ಮಾನಎಷ್ಟಿದ್ದರೂ । ತುಚ್ಛಮಾತುಗಳು । ಹಾಡುವರು । ಅಕ್ಕತಂಗಿಯರಿಗೆ । ಅಪಮಾನ ಎಂಬುವರೂ ॥೩॥ ಧನವಿದ್ದರೆ । ಗತಿಯು ನೀನೆಂಬುವರು । ಧನವಿಲ್ಲದಿದ್ದರೆ । ಆದರಿಸರು । ಪೂರ್ಣಹಣವಿದ್ದರೆ । ಮರೆ ಮಾಡಿ ತಿಂಬುವರು । ಅತಿರಿಕ್ತವಾಗಿದ್ದರೆ । ಅಜೆಗೆ ನೂಕುವರೂ ॥೪॥ ವುಪಚಾರ । ಮಾಡಿದರು ಚೀ ಹೋಗು । ಯೆಂಬುವರು । ನಾಲ್ಕುಮಂದಿ ಅನ್ನವ ತಿಂದಳೆಂಬುವರು । ಇಷ್ಟು ನೋಡಿಕೊಂಡು । ಮಿಗಲಾಗಿ ಏಂತರೆ । ಶ್ರೀತನಾರಾಯಣನ । ನೆನದವಳೆನಾರಿ ॥೫॥ ಪತಿಯಿಲ್ಲದಾನಾರಿ ॥

ಭಜನೆ-ರಾಗ-ಕಾಂಬೋಧಿ-ಝಂಪೆತಾಳ.

ಬಾಗಿಲನು । ತೆಗೆಸಿ ಸೇವೆಯನು । ಕೊಡೊ ಹರಿಯೇ ॥ಪಲ್ಲವಿ॥ ಕೂಗುವಧ್ವನಿ । ಕೇಳ್ವದಿಲ್ಲವೇ ಜೊರೆಯೇ ॥ಅನುಪಲ್ಲವಿ॥ ಪರಮಪದದೊಳಗೆ । ವಿಷಧರನ । ತಲ್ಪದಲಿನೀ । ಸಿರಿಸಹಿತ ಕ್ಷೀರವಾರಿಧಿಯೊಳಗಿರಲೂ । ಕರಿರಾಜ ಕಷ್ಟದಲಿ । ಆದಿಮೂಲವಿದೆಂದು । ಸ್ಮರಿಸಲಾಕ್ಷಣ ಬಂದು ಪೊರೆದೆ । ಶ್ರೀಹರಿಯೇ ॥೧॥ ಕಡುಕೋಪದಿಂ ಖಳನು । ಖಡುಗವನು ಪಿಡಿದುನೀ ನೋಸಯನಲ್ಲಹನೆಂದು ಜಡಿಯೇ । ದೃಢಭಕ್ತ । ಶಿಶುವು । ಕಂಗೆಡದೆ ನಿನ್ನನು ಕರಿಯೆ । ಘುಡಿಘುಡಿಸಿ ಸ್ತಂಭದಿಂದೊಡೆದೆ ನರಹರಿಯೇ ॥೨॥ ಯಮಸುತ

ನರಾಚಿ ಗಕ್ಷ್ಯಯವನು ಕೊಟ್ಟೆ ॥ ಸಮುದ್ರದಿ ಅಜಮಿಳನ ಪೊರೆದೆ । ಸಮಯವಾಸನುಂಡು । ವುಂಟೆ ಭಕ್ತವತ್ಸಲನಗೇ । ಕಮಲಾಕ್ಷ ಕಾಗಿ । ನೆಲೆಯಾದಿ ಕೇಶವನ । ಬಾಗಿಲನು ಕಗೆ ಸೇವೆಯನು ॥೩॥

ಭಜನೆ.

ಯಮನೆಲ್ಲೋ । ಕಾಣೆನೆಂದು । ಹೇಳಬೇಡ । ಯಮನೇ । ಶ್ರೀರಾಮನು । ಸಂದೇಹಬೇಡ ॥ಪ॥ ನಂಬಿದ ವಿಭೀಷಣನಿಗೆ । ರಾಮನಾದ । ನಂಬದಿದ್ದ ರಾವಣನಿಗೆ । ಯಮನೇಯಾದ ॥೨॥ ನಂಬಿದ ಪ್ರಹ್ಲಾದಗೆ । ನರಸಿಂಹನಾದ । ನಂಬದಿದ್ದ । ಹಿರಣ್ಯನಿಗೆ । ನೃಸಿಂಹನಾದ ॥ ಯಮನಾದ ॥೩॥ ನಂಬಿದ ಸುಗ್ರೀವನಿಗೆ । ರಾಮನಾದ । ನಂಬದ ವಾಲಿಗೆ । ಯಮನಾದ ॥೪॥ ನಂಬಿಕೊಳ್ಳಿ । ನೀಲಮೇಘಶ್ಯಾಮನಾ । ಈಜಗ । ಕಂಕಪುರಿ । ಪುರಂಧರವಿಠಲನಾ । ನಂಬೀ ಈಗಾ । ಯಮನೆಲ್ಲೋ ॥೫॥

ಭಜನೆ-ರಾಗ-ಅಟಕಾಳೆ.

ದುರ್ಲಭದೇಹಾಗಾದ । ಸಂಸಾರವೆ ಹಬ್ಬಾ । ಗಂಗಾಸ್ನಾನವಾಗಿ । ಸಜ್ಜನಸಂಗವೆ ಹಬ್ಬಾ । ಕವಲಿಲ್ಲದ [illegible] ಷ್ಟ । ಬಯಸದಿಪ್ಪುದೆ ಹಬ್ಬಾ । [illegible] ಕಾ । ಬಹಳಾನಾವೆ ಹಬ್ಬಾ । ವನಜನಾಭನ । ನೋಡಿ ಪಾಡುವುದೆ ಹಬ್ಬಾ । ದಿನಪ್ರತಿದಿನ । ಸತ್ಕರ್ಮಾಚರಣೆ ಹಬ್ಬಾ । ಮನಶಾಂತಿಕೆಯಲ್ಲಿ । ದೈವಭಾಗ್ಯವೆ ಹಬ್ಬಾ । ಮಾನಸರೆ ದೊರೆನೋಡಿ । ಬಳಲದಿಪ್ಪುದೇ ಹಬ್ಬಾ । [illegible] । ಪರಿಹಾರದೆ ಹಬ್ಬಾ । ಮನಸಿಗೆ ವ್ಯಾಧಿ । ಬಾರದೊಂದೆ ಹಬ್ಬಾ । [illegible] । ವಿಜಯವಿಠಲನ [illegible] ಮನಶ್ರೀನೊಳಗೆ ದಿನ । ನಿಲ್ಲಿಸುವದೇ ಹಬ್ಬಾ ॥೪॥

ಭಜನೆ.

ರಾಮರಾಮರಘು । ರಾಮಸರಾಕ್ಷರ । ರಾವಣ ಸಂಹರ । ರಣಧೀರಾ । ರಥಂಗಶರಗಣ । ಪತಂಗವಾಹನ । ರಮಾರಮಣ । ನಾರಾಯಣಾ ॥ ರಾಮ ॥೧॥ ಸಾರಶೀಲ । ಸುರಲೋಲ । ನಿರಂಜನ । ಸತ್ಯಪಾರಾಯಣ । ಸುವಿಧಾನ । ಸರೋಜಲೋಚನ । ಸುರೇಶಪಾವನ । ಶರಣ್ಯಮುನಿ । ಬೃಂದಾವನ ॥ ರಾಮ ॥೨॥ ಮುರಾರಿದಾನವ । ವಿರಾಮ ಕೇಶವ । ಪರತ್ಪರಾಧಿ । ವಿಮೋಚನೆ । ಹರಾದಿವಂದಿತ । ಧರಾಧಿನಾಯಕ । ವರಾಂಬುಜಾತ । ವಿಮೋಚನಾ॥ರಾಮ॥ ॥೩॥ ಅಪಾರನಿಸ್ತುಲ । ಕೃಪಾಕರ । ಭಕ್ತಪಾಪಹತಿ । ವಿಚೆದನಾ । ವಿಪಾತಕಾರಣ । ವಿಪಕ್ಷನಾಶನ । ಸುಪಾವನ । ಮಧುಸೂಧನಾ ॥ ರಾಮ॥೪॥ ದೀನಾಧಿಪಾಬ್ಜನಯನ । ದೆವಾವರವಿನಾಯಕಾಂಚಿತವೀ । ವಾಹನಾ । ಘನಾಘನಾಂಚಿತ । ನೀಲವಿಗ್ರಹ । ಸನಾತ । ಲೋಕವಿಮೋಚನಾ ॥ ॥ರಾಮ॥೫॥

ಆರವ-ಭಜನೆ.

ಹನುಮಂತಾ । ಹನುಮಂತಾ ॥ಪಲ್ಲವಿ॥ ಅತಿಹಿತ ಭುಜಬಲಚತುರಾ । ಜಯಜಯ । ಹನುಮಂತಾ ॥ ಹನುಮಂತಾ ॥೧॥ ವಿಶ್ವಸ್ವರೂಪ ವಿಮಲಪ್ರಬೋಧ । ವಿಜಯರವಿಕುಲ । ರಘುಪತಿದೂತಾ । ಹನುಮಂತಾ । ಹನುಮಂತಾ ॥೨॥ ವಾಯುಪುತ್ರಾ । ಮೈತ್ರಿವಿಚಿತ್ರಾ । ವರಮುರುಳ್ವಾರ್ಚ್ಯ । ಕರುಗಣ ಕರೀನೇತ್ರಾ । ಹನುಮಂತಾ । ಹನುಮಂತಾ ॥೩॥

ಭಜನೆ.

ಬಿಕ್ಷವನೀಡುವ । ಪತಿವ್ರತಸ್ತ್ರೀಯರಿಗೆ । ಈ ನರಜನ್ಮವು । ಬರುವದುಂಟೆ ॥ಪಲ್ಲವಿ॥ ಬಿಕ್ಷಾದಿಕಾರಿಯೋ । ವಿಷ್ಣುಸ್ವರೂಪನೆಂದೂ । ಈಕ್ಷಿಸಿ ನೋಡುವ । ಸ್ತ್ರೀಯರಿಗೆ ॥ಅನ॥ ವಂದಿತಿಬಿಕ್ಷವೆ । ಮುಂದಿನ ಪಾಪವೆಲ್ಲ । ಬೆಂದುಹೋಗುವದೆಂದು । ಶಿವಶೃತಿಸಾರುತಿದೆ । ಮಂದರಗಿರಿಧರ । ನಂದೀಶ್ವರನಿಗೆ । ವಂದಿಸಿ ಪ್ರೀತಿಯು । ಮಾಡುವಗೆ ॥೧॥ ಅತಿಥಿಯು ನುಕಂಡು । ಮಿತವಿಲ್ಲದೆ । ಮಾತಾಡುವ । ಸ್ತ್ರೀಯರಿಗೆ । ಕಾಶಿದ ಉಕ್ಕುಸ್ತಂಭವೆ ಗತಿಯಂದೂ । ತೋರಿಸಿ ಯಮದೂತರಿಡಿದು । ತಬ್ಬಿಸುವಾರು ॥೨॥ ಪತಿಯರನಾ ಬಿಟ್ಟು। ಸತತಾವು ಯಿತರ । ದೇವತೆಗಳ ಪೂಜಿಸಿದರೆ । ಪತಿಗೀಕ್ಷಿತಿಯಲ್ಲಿ । ಕ್ಷೀಣವಾಹುದೂ । ಸತಿಗೆ ಯಮನ । ಶಿಕ್ಷೆ ತಪ್ಪದೂ ॥೩॥ ಸತಿಗೆಸದ್ಗತಿಯು । ಧರೆಯೊಳು । ತೋರದೂ । ಪತಿಯಿಂದ । ಮೋಕ್ಷಾವು ದೊರಕೂವದೂ । ಭಾವಿಸಿಪತಿಪಾದ ॥ ಪೂಜಿಸಿ ಮತಿವಂತರಾಗಬೇಕು । ಯುವತಿಯರೂ ॥೪॥ ಪತಿವ್ರತಸ್ತ್ರೀಯರಿಗೀಕ್ಷಿತಿಯಲಿ । ತೋರುವ ಇತರ ಜಪತಪಗಳ್ಯಾಕೆ । ಬುದ್ಧಿವಂತರಾದರೆ । ಪತಿಯ ಪೂಜೆಯಿಂದ । ಹತವಾಗುವದು । ದುರ್ದೋಷಗಳು ॥೫॥ ಹುವ್ವಿನ ವೆಂಕಟೇಶ । ಪಾಳ್ಯನಿವಾಸಿಯಾದ । ಯುವತಿಯರೊ । ಮುದ್ದುದಾಸನ ಕಾಯುವ । ಶ್ರೀನಿವಾಸ । ಸೇವಕನಾಗಿ ನೀವೂ ॥ ಜೀವಿಸಬೇಕೆಂದು ಪ್ರಾರ್ಥಿಸುವೇ ॥೬॥

ಭಜನೆ

ಹಣವೆ । ನಿಮ್ಮಯ । ಗುಣವೇನ ಬಣ್ಣಿವೆ । ನೆಂದು ಹಣವಿಲ್ಲದವನೊಬ್ಬ । ಹೆಣವೆಸರಿಮನುಜಾ ॥ಪಲ್ಲವಿ॥ ಬೆಲೆಯಿಲ್ಲದವನೆಲ್ಲ । ಬೆಲೆಯ । ಮಾಡುವೇ । ಯಲ್ಲಾವ । ಸ್ತ್ರ

ತಿಗೇರಿದ್ದಲ್ಲಿಗೆ । ತರಿಸುವೇ । ಕುಲಕೆಟ್ಟವರ । ಸತ್ಕುಲಕ್ಕೆ ಸೇರಿಸುವ । ಹೊಲೆಯನಾದರೂ । ಕಳಗೆ । ತಂದಿರಿಸುವೆ ॥ ಹಣವೆ ॥೧॥ ಅಂಗನೆಯರ । ರತಿಕ್ರೀಡೆಯ । ಮಾಡಿಸುವೆ । ಶೃಂಗಾರ । ಆಭರಣಂಗಾಳ । ಬೇಗ ತರಿಸುವೆ । ಕಣ್ಣಿಲ್ಲದವರಿಗೆ ! ಮಗಳನ್ನ ಕೊಡಿಸುವೆ । ಮಂಗನಾದವರು ॥ ಮನ್ಮಥನೆನಿಸುವೆ ॥ಹಣವೆ॥೨॥ ಚರಣಕ್ಕೆ । ಬಂದಂತೆ । ದುರಿತವ । ಬಿಡಿಸುವೆ । ಸರ್ವರಿಗೆ ಶ್ರೇಷ್ಠ । ನರನಮಾಡಿಸುವೆ । ಅರಿಯದ । ಕುಂಟನ । ಅರಿತವನೆನಿಸುವೆ । ಸಿರಿಹಯವದನ । ಚರಣವ । ಮರಸುವೆ ॥ಹಣವೆ॥೩॥

ತತ್ವ-ರಾಗ-ಬೇಹಾಗ್-ಅಟ್ಟತಾಳ.

(ಕುಳಿದಾತಬೇಡನ್ನ ಮನೆಗೆ-ಎಂಬಂತೆ)

ಹಣವುಳ್ಳವನೆ । ದೊಡ್ಡಮನುಜಾ । ಅಂತ । ಹಣವಿಲ್ಲದಿರ್ದರೆ । ಬರಿದಾಕಣಜಾ । ॥ಪಲ್ಲವಿ॥ ಎಲ್ಲಾರು ಕೊಂಡಾಡುವರು । ಅನ್ನ ।ಸೊಲ್ಲು ಸೊಲ್ಲಿಗೆ । ಬಾಳಕೂಗಳುತಲಿಹರು ಗಲ್ಲವ ಮುದ್ದಿಸುತಿಹರು । ಅವನಿ । ಗಿಲ್ಲದ ಸುಗುಣವನೆಲ್ಲ ತೋರುವರು ॥ ಹಣವು॥೧॥ ಮಾತುಮಾತಿಗೆ ಪ್ರೀತಿಸುವರು ಅವನ । ಕೂತರೆಯೇಳ । ಗೊಡದೆ ನುಡಿಸುವರು । ತಾತ ಅಪ್ಪನೆಯನ್ನುತಿಹರು । ಮತ್ತು । ಪಾತಕಿಯಾದರು । ನೀತನೆನ್ನುವರು । ॥ಹಣ ॥೨॥ ಊಟಪಾಟವ ಮಾಡಿಸುವರು । ದಿವ್ಯ । ನೋಟವಕರಕೊಂಡು । ತೋರಿಸುತಿಹರು । ಆಟಿಗಳನು ಆಡಿಸುವರು । ಬಂದಕಾಟಕೆ ತಮ್ಮ ಪಾಲಿಯಹಾಕುವರು ।॥ ಹಣವು ॥೩॥ ಘನವ್ಯಾಪಾರದಿಂದ ಜಗದಿ । ತಾನು । ಗುಣಹೀನನಾದರು ದೊಡ್ಡವನಿಜದಿ । ಹಣವಿರಬೇಕಪ್ಪ । ಕರೆದಿ । ಅಂತ । ಹಣವಿಲ್ಲದಿದ್ದರೆ । ಹಣವುತಾಜವದಿ ॥ಹಣವು॥ ೪ ॥ ಬಾಳಿದಂತಾಗಿರಬೇಕು । ಮತ್ತು । ತಾಳಿಕೆಯಿದ್ದರೆ । ಹಣವಿರಬೇಕು - ಕೂಳಿಲ್ಲದ

ಬಾಳು - ಸಾಳು - ನಮ್ಮ-ಗೋಪನು - ಕೇಳುತ - ಜೀವನಿ
ಸಾಳು ॥ಕೇಶವ॥೫॥

ಭಜನೆ-ರಾಗ-ಜಂಗಲೆ-ಆದಿತಾಳ.

(ನಂಬಿದೆ ನಂಬಿದೆ ನಾರಾಯಣ ಎಂಬಂತೆ)

ನಂಬಿದೆ ನಿನ್ನನು । ಪಾದಸರೋಜವ - [illegible]
ಪ್ರಣತೇ - ಸ್ತಂಭೇರಮಮುಖ - ತುಂಬುರುನಾರದ -
ಕುಂಭಜರುಷಿವಂದ್ಯಾ ॥ಪಲ್ಲವಿ॥ ಪೂಜಿಸಿ ನಿನ್ನನು - ಸಿದ್ಧಿ
ಯುಪಡೆದರು - ಭುಜಗಶಯನ ಮುಖರು । ಅಜಗಾ [illegible]
ಣ - ಕಾರ್ಯಾರಂಭದಿ - ತ್ರಿಜಗವು ಪೂಜಿಪುದು ॥೧॥ ಅಂತ
ರಾಯಗಳ । ದೂರದಿ ಹರಿಸೋ - [illegible]
ಚಿಂತಿತವನು ಕೊಡು - ನಮ್ಮ [illegible]
ಹರಿಸೋ ॥೨॥ ಬಾಲಕರೆಲ್ಲರು - ಬಹು ಸಂತೋಷದಿ - [illegible]
ಲನೆ ಮಾಡುವರು - [illegible]
ರುತಿ - ಲಾಲನೆ ಮಾಡುವರು ॥೩॥

ಭಜನೆ-ರಾಗ-ಆದಿತಾಳ.

ಕ್ಷೀರಸಾಗರ - ಶಯನ - ನಾರಾಯಣ - [illegible]
ಸೋ ಲಕ್ಷ್ಮೀರಮಣಾ - ಆರು ಕಾಯ್ವರೆನ್ನ ಹರಿ - [illegible]
ರಿಂದಾರ್ಯರೋ ಪೇಳೋ - ಶೌರಿ - ಕೊರಗಿಸಬ್ಯಾಡ [illegible] -
ಬಾರೈಯ್ಯ ಮುರಾರಿ ॥೧॥ ಕುಂದುಗಳೆಣಿಸದೇ ಬಂದ
ಕಾಯೋ ದಯಾನಿಧೆ ಮುದದೊಳು ನಿನ್ನಯ ಚರಣವ ನಂಬಿ
ದೇ ॥೨॥ ಅಂಧಕಾರದಲ್ಲಿ ತಂದುಬಿಟ್ಟೆ ದಯಾಕರ ಇಲ್ಲಿ
ಬಂದು ಕಾಯೋ ರಂಗ ದೇವ ಇಲ್ಲಿ ತಂದೆ [illegible]
॥೩॥ ಬಂದನೇ [illegible] ಶರಣ್ಯ [illegible]
ಯಾ ಮುಂದೆ [illegible]
॥೪॥ ಕ್ಷೀರಸಾಗರಶಯನಾ ॥

ದಶಾವತಾರದ ಲಾವಣಿ

ಭಜನೆ-ರಾಗ-ತಾಳ

ಬ್ಯಾಟ್ರಾಯಸ್ವಾಮಿದೇವುಡ - ನಾಯಿಲ್ಲಿವಾಡ - ಬ್ಯಾಟ್ರಾ ॥ ಪಲ್ಲವಿ ॥ ಕಾಟೀಮಿರಾಯನುಡ - ಕವಲೀನರಚಿಂಮುಡ - ನೀಟೈನಯಾಟ್ಕಡ - ನಿನ್ನೇನಂಮಿತಿರಾ ॥ ೧ ॥ ಚಾಪಾಕಡವುಚೇರಿವುಟ್ಯಗಾ - ವೋಏನನ್ನ ನಿಳ್ಳಲೋನ - ವಿಲಶಿಗಕ್ಕನ ಕರಿಗೀವೇದಕೀ ಬ್ಯಾವುನೆಂಳು ಚಿದುಲೆಲ್ಲಾ ಬೆಮ್ಮದೇವನನಿಕಿಚ್ಚ್ಯ ನೊಡಾ । ಬ್ಯಾಟ್ರಾ ॥೨॥ ಅಂದಗಾರಕಾದುಲೇವ್ಯೆಯ್ಯ । ಗೋವಿಂದಗೋಪಾಲ । ರಚ್ಚಿಂಚರಾವ್ಯೆಯ್ಯಾ । ಪಂದಿಲೋನ ಚೇರುಕೋನಿ । ಪಂಟಿಲೋನ ಯೆತ್ತಿಭೂಮಿಕಿಂದ । ವಿಸಾದಗಾನಬಟ್ಟಿ । ಚಂದವಾಮು । ನೀವೇಗಾದ ॥ ಬ್ಯಾಟ್ರಾ ॥೩॥ ನಾರಸಿಂಮುನಿಂನೆನಂಮಿತಿ । ನಾನಾಟಿಕಿ ಕೋರಿನಾನು ಪಾದಮೇಗತಿ । ಓರಿನೀವು ಕಂಭಾನಕೇರಿ । ಪ್ರಕುಲಾದನಿಕ ಕೋರವಿಾಸವ್ಯೆನ । ಗುಂಪ್ಲದೊರಜೇಶಿನಾಡು ಬ್ಯಾಟ್ರಾ ॥೪॥ ಬಾಡತನಬಾಕ । ನ್ಯೆಯ್ಯ್ಯಶಿವಿ । ನಾಚಕ್ರವರ್ತಿನಪಗಿ । ಭೂಮಿಗೆಲ್ಲ ಕೊಂಟಿವಿ । ಪೊಡವುಕಾಳ । ಪೊಡವ್ಯೆ ಅಡಗುಹಾನಿ । ವಿಾವಬೆಟ್ಟು ತಡವು ಲ್ಯಾಕ । ಲೋಕವೆಲ್ಲ । ಪೊಡವು ಲೋನೆ ಗುರ್ಜಿನೋಡಾ ॥ ಬ್ಯಾಟ್ರಾ ॥೫॥ ರೊಂಡುಪೊದ್ದು ಲೆಕ್ಕಬಾರಿಕು । ದೇವಲೆಲ್ಲಾ । ಚಂಡಾಡಿವುದು ಪರಚಿ

ತ. ತೆ, ತ. ನೆ - ತೆ ತೆ - ತ ತೆ, ತ, ತ, ತ, ತ ತ, ತ ೯

ಕಂಡಮೆಲ್ಲವಿಡಚಿಪಟ್ಟಿ ಕೊಂಪಜೆಪುಡೆಯೇಗಿ ನೋಡಾ - ॥೬॥ ರಾಮನೀವು ರಚ್ಚಿಂಪುರಾ - ಭೂಮಿಲೋನ - ಮಾಕೆಲ್ಲಬುದ್ಧಿಚಪ್ಪರಾ - ಏಮಿಕಾಮುಸಮುಜೇಸಿನ - ಸ್ವಾಮಿಮಾಯಪ್ಪ - ಬುದ್ಧಿ - ನೀಮನಸುಸಲಿದನಮು - ನಾ

ವಿಾದ ಸೂಪರೋ ಶೀ ॥೭॥ ದೇವಕ್ಕ ದೇವಕೊಡುಕುರಾ ಧರಣಿಲೋನ । ನೇವುಡೈವೆಲಸಿನಾವುರಾ । ಹಾವುಲಾವೇ ಪುಕೋನಿ ಹಾಡೋಳುತೂಚೇರುಕೋನಿ ತಾವುಬಾಗ ಜೇಸುಕೊನಿ ತಾ ತಕರಬಿಕರಜೇಶಿನೋಡಾ ॥೮॥ ಮುದುಲು ವಂಮರಾದುರಾ ಹಾಶಾಸ್ತ್ರಮುಲು ವಾವಾಲುಭೇದಮೆಂತ ನಿಸಾದಾವಿನೋದುಡೈನ ನಲ್ಲನಯ್ಯ ನೀವೆಕಾದಾ ॥೯॥ ಕಲ್ಲಿನಡೂರವು ನೀವುರಾ। ನಾತೋಪಲ್ಕರಾವು ಭಮುಕೀಶನು। ಚಿಲ್ಲಗಟ್ಟೆ ಪುರಮುಲೋ। ಚಿಂನಿಗೋಪಾಲುಡವೈ। ಪಿಲ್ಲಗೋವಿಪಟ್ಟುಕೋನಿ ಪ್ಯಾಟಪ್ಯಾಟ ತಿರುಗಿನೋಡಾ ॥ ೧೦ ॥

ಕೀರ್ತನೆ-ರಾಗ ಆದಿತಾಳ.

ತಂಗೀ ಗೇಳಿವನು । ಶ್ರೀಕೃಷ್ಣ ಚಂದದಲಿ ಬುದ್ಧಿ ॥ಪಲ್ಲವಿ॥ ಗಂಡನಾವಾನೆಮುಲ್ಲಿ । ಇರುವಂತೆ ಸುದ್ದೀ । ಯಾರೊ ಏನಂದರು । ಮೋರೆಯನು । ತಿರುಗದಿರು । ಊರಿಗೆ ನಾರಿಯರು । ನೀರನ್ನು ತರುವಾಗಾ । ವಾರೆಗಣ್ಣಿನ ನೋಟ। ನೋಡದಿರಮ್ಮಾ ॥ ತಂಗೀ ॥೧। ಬಂಗಾರಪೇಟೆ । ಎಂದಂಗಡಿಗೆ । ಹೋಗದಿರು । ಅಂಗನೆಯರಿಗೆ । ಮಾನಭಂಗವಹುದೂ । ಅಂಗನೆಮರಿಗೆ । ನಿನ್ನಂಗವನು । ತೋರದಿರೂ । ಬಂಗಾರದವಸ್ತು । ನೀ ಮುಚ್ಚಿಟ್ಟುಕೊಳ್ಳಮ್ಮಾ ॥ ತಂಗೀ ॥ ॥೨॥ ಪರರಪೊಡೆವಯಕಂಡು । ಕೇರುಡಿಯಂತಿರು ಕಂಡ್ಯಾ । ನೆರೆಹೊರೆಯುವನೆಗೆ । ನೀ ಹೋಗದಿರಮ್ಮಾ । ಪರರಮಾತುಗಳನ್ನು । ಪರಲೋಚಿಸಲು ಬೇಡಾ ॥ತಂಗೀ॥೩॥ ಹಾಕಿದ್ದು ಉಂಡುನೀ । ಬೇಕೆಂದು ಬೇಡದಿರು । ಸಾಕುಸಾಕು ಎಂಬ ನಾಚಿಕೆಯು। ಹಿಡಿಯೆ ಸಂಲ್ಕುಮಂದಿಯೊಳಗೆ ಹೋಗಿ। ಮಾಕಾಡದಿರು । ಲೋಕದೊಳಗೆ ಒಬ್ಬ ಮೂಗಿ ಎಂಬೆನಿಸಿ । । ತಂಗಿ ॥೪॥ ಅಷ್ಟಮಂದಿಗಳೊಳಗೆ । ನಿಷ್ಟೂರವಾಗದಿರು ।

ಗಟ್ಟಿಮಾಡಮ್ಮಾ । ನಿನ್ನ ಮನಸೂ । ಸೃಷ್ಟಿಸಿದ ಪುರಂದರ। ವಿಠಲರಾಯನ ನೆನೆಯೋ । ಶ್ರೀಕೃಷ್ಣನಾತಂಗಿ । ನೀ ।ಎಂದೆ ನಿಸೋ ॥೩॥

ಭಜನೆ-ರಾಗ-ಕಾನಡ-ಆದಿತಾಳ

ದೇವಜಗದಾಧಾರ । ಅಪಾರ ಕರುಣಾಕರಾ ॥ಪಲ್ಲವಿ॥ ದೇವಜಗಧೀಶ್ವರ । ದಿವ್ಯಾಕಾರ ॥ ದೇವ।೧॥ ನಿಗಮವಿನುತ। ನಾರದಿಭಜಿತ । ನಗಧರ ಹಿತಕರ । ವಾಸುದೇವ ॥ ದೇವ ॥ ॥೨॥ ಸದಯ ಹೃದಯ । ಸನ್ನುತ ವಿಜಯ । ವಿಧಿಹರವಿನ ಮಿತ । ವಸುದೇವ ॥ ದೇವಜಗದಾಧಾರ ॥ ೩ ॥

ಭಜನೆ-ರಾಗ-ಮೋಹನ-ರೂಪಕತಾಳ.

ಆಹಾ ಯಿದೇನಿದೂ । ಆಶ್ಚರ್ಯವಾದುದು । ಮಹಾನು ಭಾವ । ನಿಮ್ಮ ದಯಬಾರದಿರುವುದು ।ಪಲ್ಲವಿ॥ ಶರಣನಲ್ಲ ವೆ । ನಿಮಗೆ ಕರುಣವಿಲ್ಲವೆ ॥ ಅರುಣಕರುಣ ನಿಮ್ಮ । ಚರ ಣ ನಂಬಲಿಲ್ಲವೆ ॥೧॥ ಮಾರಜನಕನೇ ನಿಮಗೆ । ಭಾರವಾ ದೆನೇ । ನೀರಜಾಕ್ಷ ನಿಮ್ಮ । ಮನಕೆ ತೋರದೋದೆನೆ ॥೨॥ ರಂಗನಾಥನೆ । ಭಕ್ತಸಂಗಸುಖವನೆ।ಮಂಗಳಾಂಗ ಕರುಣಿ ಸೊ ಗುರುರಂಗನಾಥನೆ ॥ ೩ ॥

ಭಜನೆ-ರಾಗ-ಮುಖಾರಿ-ಝಂಪೆ-ತಾಳ

ಮೆರೆಯದಿರು । ಮೆರೆಯದಿರು ಎಲೊ ಮಾನವ।ನಿನ್ನ। ಸಿರಿಯುಹವಕೇನು । ಹೇಳೆಲೊ ಮಾನವ ॥ ಪ ॥ ಸಿರಿಯೊ ಳತಿಸಾಧವನೋ । ಹಿರಿಯರೊಳು । ರಮೇಶನೋ।ದುರುಳ ರಾವಣನ। ಸಂಪದವು ನಿನಗೇ । ದುರ್ಯೋಧನನ । ಪೋಲ್

ಮುಕುಟವರ್ಧನನೊ । ನಿನ್ನ ಸಿರಿಯುಹವಣೇನು।ಹೇಳಲೋ ಮಾನವಾ ॥೧॥ ಬಲುಹಿನಲಿ । ವಾಲಿಯೋ । ಚಲುವಿಕೆಗೆ । ಕಾಮನೋ । ಸಲುಗೆಯಲಿ ನಾರದನೋ । ಹೇಳು ನೀನೂ । ಕಲಿಗಳೊಳು । ಭೀಷ್ಮದ್ರೋಣಾ । ಚಾರ್ಯ ಫಲ್ಗುಣನೋ। ಕುಲದೊಳಗೆ ವಶಿಷ್ಟ । ನೋ ಹೇಳಲೋ ಮಾನವಾ ॥೨॥ ತ್ಯಾಗದಲಿ ಕರ್ಣನೋ । ಭೋಗದಲಿ ಸುರಪನೋ । ಭಾಗ್ಯದಲಿ ದಶರಥನೋ । ಹೇಳೂ ನೀನು । ರಾಗದಲಿ ತುಂಬುರನೋ । ಯೋಗದಲಿ ಸನಕನೋ । ಹೀಗ್ಯಾವ್ಹೋಲ್ವೆ । ನೀಹೇಳಲೊ ಮಾನವಾ ॥೩॥ ಯುಕ್ತಿಗಳೊಳಗಸ್ತ್ಯನೋ । ಜೊತೆಗಳೊಳು । ಹನುಮನೋ । ವ್ರತಕೇಳು । ಕೇಶ್ವರನೋ।ಹೇಳು ನೀನೂ । ಶೃತಿಪಾಠವಿಬುಧರೊಳು । ಬೊಮ್ಮನೋ ನಿನ್ನ ಶುಭಮತಿಯು । ಹವಣೇನು । ನೀ ಹೇಳಲೊ ॥೪॥ ವಿದ್ಯೆಯಲಿ ಸುರಗುರುವೊ । ಬುದ್ಧಿಯಲಿ ಮನುಮುನಿಯೋ । ಶ್ರದ್ಧೆಯಲಿ ನೀನಾರ ಹೋಲ್ವೆ ಹೇಳು । ಸಿದ್ಧರೆಂಬುನವಕೋಟಿ । ಯೊಳಗೊಬ್ಬನೋ ನೀನು । ಕ್ಷುದ್ರಮಾನವನಿನ್ನ ಶಿರಿಯು ಹವಣೇನೊ ॥೫॥ ಸೋಲಿಗೆಲ್ಲದಾ ಮಾತು । ಸಲ್ಲದೆಲ್ಲವು ನಿನಗೆ । ದೆಲ್ಲವನು ಬಿಡುಗರ್ವ ನಿನಗೇತಕೋ। ಬಲ್ಲಿದನಾದರೆ । ರಾಮಕೇಶವ ಸ್ಮರಣೆಯನೂ । ಸೊಲ್ಲುಸೊಲ್ಲಿಗೆ ನುಡಿಸಿ ಸುಖಿಯಾಗಿ ಬಾಳು ॥೬॥

ಭಜನೆ

ಶೃಂಗಾರವಾಗಿಹುದು । ಹೊಸದಿದು ಮಂಚಾ । ಅಂಗನೇರುಕ್ಮಿಣೀ । ಒಂದಿಷ್ಟವಳಿದ ಮಂಚಾ ॥ಪಲ್ಲವಿ॥ ಬಡಗಿ ಮುಟ್ಟದ ಮಂಚಾ । ಮುದ್ದಿನೊಳಿಹ ಮಂಚಾ । ಮೃಡನತೊಳಲಿ । ಒಡಗಿದುವೃದಾ ಮಂಚಾ ॥ಪಲ್ಲವಿ॥ ಸಡಗರಾವಳ್ಳ ಮಂಚಾ । ಹಡೆಯುಳ್ಳ ಹೊಸ ಮಂಚಾ । ಪೊಡವಿಗೊ

ಡೆಯ। ಪಾಂಡುರಂಗಮಲಗುವಾ ಮಂಚಾ।೧॥ ಕಣ್ಣು ಕಿವಿಯು ಳ್ಳ ಮಂಚಾ । ಬಣ್ಣ ಬೆಳಗಿಸಾ ಮಂಚಾ । ಬನ್ನ ಪೆಟ್ಟಿಗೆಯೊಳು ಅಡಗಿಹುದಾ ಮಂಚಾ ॥ ಹುಣ್ಣಿಮೆಯ ಚಂದ್ರನಾ। ಬಣ್ಣಗೆಡಿಸಿದಾ ಮಂಚಾ । ಕನ್ಯೆ ಮಹಾಲಕ್ಷ್ಮಿ । ಅರಸಪವಳಿಪ ಮಂಚಾ ।೨॥ ಕಲ್ಲಿಲ್ಲದಾ ಮಂಚಾ । ಗಾಳಿಗಾಡುವ ಮಂಚಾ । ತೋಳುಬೆಳುಕಿನ ಮಂಚಾ । ವಿಷದಾ ಮಂಚಾ । ಕಾಳಗದೊಳರ್ಜುನನಾ । ಮಕುಟಕೆಡಹಿದಾ ಮಂಚಾ । ಕಾಡಿಯಾ ಪರೀಕ್ಷಿತನಾ । ಸಂಹರಿಸಿದಾ ಮಂಚಾ ॥೩॥ ಹುತ್ತದೋಳಿಹ ಮಂಚಾ । ಭುವನಹೊತ್ತಿಹ ಮಂಚಾ । ಹೆತ್ತ ಮಕ್ಕಳಿಗೆಲ್ಲಾ । ಹೆಸರಿಡುವಾ ಮಂಚಾ । ಹತ್ತಬಾರದ ಮಂಚಾ । ಹತ್ತಲಿಸದ ಮಂಚಾ । ಪೊಡವಿಗೊಡೆಯಾ । ಪಾಂಡುರಂಗ ಮಲಗುವ ಮಂಚಾ ॥೪॥ ಏಳು ಹೆಡೆಯುಳ್ಳ ಮಂಚಾ । ಬಹಳ ಮೃದುವಿನ ಮಂಚಾ । ಧ್ಯಾನಮಾತ್ರದಿ ಸಾರದರಿಗೊಲಿವುದಾ ಮಂಚಾ । ಶ್ರೀಲಕ್ಷ್ಮೀಪತಿ ಮಂಚಾ। ಸ್ವಾಮಿ ಶ್ರೀ ಪುರಂಧರ । ವಿಠಲ ಮಲಗುವ ಮಂಚಾ ॥೫॥ ಶೃಂಗಾರವಾಗಿಹುದು ॥

ಈಶ್ವರ-ಮಂಗಳಂ-ರಾಗ-ಕಮಾಜ್-ರೂಪಕಾಳ.

(ಮಂಗಳ ಮಹಾಬಲಾಚಲಾದಿವಾಸಗೆ ಎಂಬಂತೆ)

ಮಂಗಳಂ । ಮಹೇಶ ಈಶ । ಗಂಗಧರನಿಗೆ । ಮಂಗಳಂ । ಸುರೇಶನುತಾ । ಅಂಗಜಾರಿಗೆ ॥ಪಲ್ಲವಿ॥ ಫಾಲನೇತ್ರ ನೀಲಕಂಠ ನಿಗಮವೇದ್ಯಗೆ । ಬಾಲನನ್ನು ಸಲಹಿದ । ಕೃಪಾಲವಾಲಗೆ ॥ ಮಂಗಳಂ ॥೧॥ ನಾಗರಾಜ ಭೂಷಿತಗೆ । ಯಾಗಹರನಿಗೆ । ಯೋಗಿಜನರ ವಂದ್ಯಗೆ । ಭವರೋಗ ವೈದ್ಯಗೆ ॥ ಮಂಗಳಂ ॥೨॥ ಮೃತ್ಯುನಾಶ ಮೌನಿಗೇಯ । ಭೃತ್ಯಪಾಲಗೆ । ಧಾತ್ರಿಗಧಿಕ ವೇಣ್ಪುರಿಯ । ಕೃತ್ತಿವಾಸಗೆ ॥೩॥

ಮಂಗಳಂ-ರಾಗ-ಆದಿತಾಳ.
(ಸ್ವಾಮಿದೇವನೆ ಲೋಕಪಾಲನೆ ಎಂಬಂತೆ.)

ಪ್ರೇಮದಾರತಿ । ಯೆತ್ತಿಬೆಳಗುವೆ । ರಾಮಚಂದ್ರಾ । ದೇವಗೆ ॥ಪಲ್ಲವಿ॥ ಕಾಮಜನಕನೆ । ಕಾಯ್ವೊಭಕ್ತರ । ಸೋಮವದನ । ಸುನಾಮಗೆ । ಅನುಪಲ್ಲವಿ । ನೀಲವರ್ಣ । ವಿಶಾಲ ಶುಭಗುಣ । ಶೀಲ । ಮುನಿಕುಲ ಪಾಲಗೇ । ಬಾಲನ ಪೊರೆ । ಲಾಲಿಸಿಬಂದು । ಪಾಲಿಸಿದ ದೇವಗೇ ॥೧॥ ಪಾರಪಿತಗುಣಹಾರ । ಸಾರಕಾಕಾರ । ರಿಪುಸಂಹಾರಗೇ । ಘೋರಪಾಪವಿದೂರಗೈಯ್ಯುವೊ । ಜಾನಕಿ ಪ್ರಾಣೇಶಗೆ ॥೨॥ ದಾನವಾಂತಕ ದೀನಪಾಲಗೆ । ವೇಣುಗಾನ । ವಿನೋದಗೇ । ಮಾನದಿಂದಲಿ । ಮುದ್ದುದಾಸನ । ಪಾಲಿಪ ಕಥಾವೀರಗೇ ॥೩॥ ಪ್ರೇಮದಾರತಿ

ಮಂಗಳಾರತಿ-ರಾಗ-ಸುರಟಿ-ಆದಿತಾಳ.
(ಆರತಿ ಎತ್ತಿರೆ ನಾರಿಯರೆಲ್ಲರು ಎಂಬಂತೆ)

ಎತ್ತಿರೆ ಆರತಿ । ಚಿತ್ತಜವೈರಿಗೆ । ನೆತ್ತಿಯೊಳ್ಗಂಗೆಯು । ಪೊತ್ತ ಸರ್ವೇಶಗೆ ॥ಪಲ್ಲವಿ॥ ಬಾಲಮಾರ್ತಂಡನ । ಪಾಲಿಸಿದಾತಗೆ । ಬಾಲೆಯರೆಲ್ಲರೂ । ನೀಲದಾರತಿಯನು ॥೧॥ ಫಣಿರಾಜಭೂಷಗೆ । ಗಣಋಷಿ ಪೋಷಗೆ । ಮಣಿಮಯದಾರತಿ ॥೨॥ ಕಾಮಸಂಹಾರಗೆ । ಸೋಮಶೇಖರಧಗೆ । ಕಾಮಿನಿಮಣಿಯರು । ವಾಸುದೇವನಿಗೆ ॥೩॥ ಪಂಕಜಾಕ್ಷಿಯರೆಲ್ಲಾ । ಪಾರ್ವತಿಕಾಂತನಿಗೆ । ವೆಂಕಟನುತವರ । ಶಂಕರದೇವಗೆ ॥೪॥ ಸರಸಿಜಾಕ್ಷಿಯರೆಲ್ಲಾ । ಪರಿಪರಿವಿಧದಿಂದಳು । ಧರಣಿಯೊಳ್ವೇಣ್ಪುರ । ವಾಸ ಕಲ್ಲೇಶಗೆ ॥೫॥ ಎತ್ತಿರೆ ಆರತಿ ।

ಮಂಗಳಂ-ರಾಗ-ಜಂಜೂಟಿ-ಚಾಪು ತಾಳ.

(ಚಕ್ಕಲಿ ಪಾಟಮುಟ್ಟ್ಯ ಎಂಬಂತೆ)

ಮಂಗಳಾರತಿ ಯೆತ್ತಿ । ಮಾಮನೋಹರನಿಗೆ ॥ಪಲ್ಲವಿ॥ ಅಂಗನೆಯರೆಲ್ಲ । ಬಂಗಾರದ ತಟ್ಟೆಯಲ್ಲಿ ॥ ಅನುಪಲ್ಲವಿ ॥ ವೇದಚೋರನ ಕೊಂದು । ಭೂಧರವನು ಪೊತ್ತು । ಮೇದಿನಿಯನು ಯೆತ್ತಿ । ಕಂಬದಿ ಬಂದವಗೆ ॥೧॥ ಭೂಮಿದಾನವ ಕೇಳಿ । ಭೂಮಿವರಕ್ಷ ಕೀಳಿ । ಭೂಮಿಜಾತೆಯನಾಳಿ । ಭೂಭಾರವಳಿದವಗೆ ॥೨॥ ಬುದ್ಧಿಹೀನರಿಗೆಲ್ಲಾ । ಬುದ್ಧಿಬೋಧಿಸುತ । ಮುದ್ದು ಕುದುರೆಯೇರಿದ । ಗುರುರಾಮ ವಿಠಲನಿಗೆ । ಮಂಗಳಾರತಿ ॥೩॥

ರಾಗ-ಶ್ರೀರಾಗ; ತಾಳ-ತ್ರಿಶ್ರ

ಮರೆಕೆಯಾತಕಯ್ಯ ನಿನ್ನ ಮಾತೃಭೂಮಿಯ ॥ಪ॥ ನಿರತ ನಿನ್ನ ಹೊರೆಯ ಹೊತ್ತು ಪೊರೆವ ತಾಯಿಯ ॥ಅ॥ಪ॥ ಒಂಭತ್ತು ತಿಂಗಳು ತನ್ನೊಳಿಂಬುಗೊಟ್ಟವಳು ತಾಯಿ, ತೊಂಭತ್ತು ವರುಷಾದರು ಹೊರುವ ಕುಂಭಿನಿ ತಾಯಲ್ಲೋ ಮನುಜ ॥೧॥ ನಡೆನುಡಿ ಬರುವನಕ ನಿನ್ನ ಒಹಲು ಸಾಕಿದವಳು ತಾಯಿ, ಕಡೆತನಕ ನಿನ್ನೊಡಲಿಗೆ ಅನ್ನವ ಕೊಡುವಳು ತಾಯಲ್ಲೋ ಮನುಜ ॥೨॥ ಸತ್ತುಬಿದ್ದರೆ ಹೆತ್ತತಾಯಿ ಅತ್ತು ದೂರ ಸಾಯುವಳು, ಮತ್ತೆ ಭೂಮಿತಾಯಿಯು ನಿನ್ನನು ಎತ್ತಿಕೊಳ್ಳುವಳೋ ಪ್ರಾಣಿ ॥೩॥ ಗೇಣು ಭೂಮಿಗಾಗಿ ಯೆನ್ನ ಪ್ರಾಣ ಹೋಗಲೆನ್ನುವಿ, ಕಾಣದೇನೋ ನಾಡೇ ಪರರಾಧೀನವಾಗಿಹುದೋ ಪ್ರಾಣಿ ॥೪॥ ಮರೆವು ಮರೆತು ಹಿರಿಯ ತಾಯಿಯ ಅರಿವು ನಿನ್ನೊಳುದಿಸುವಂತೆ ಕರುಣಾಸಾಗರ ಮುದ್ದುಮೋಹನ ಗುರುವಿಗೆ ಶರಣಾಗೋ ಮನುಜ ॥೫॥

